ಭಜನ ಮಂಜರಿ

ಪರಿವಿಡಿ :

1.	ಸತತ ಗಣನಾಥ	1
2.	ಗುರು ಮಧ್ವರಾಯರಿಗೆ	2
3.	ಶ್ರೀ ಹರಿಕಥಾಮೃತಸಾರ	3–5
4.	ವಿಜಯ ಕವಚ	6–7
5.	ಅಕ್ಷರಮಾಲಿಕ ಸ್ತೋತ್ರ	8–10
6.	ಶ್ರೀ ರಾಘವೇಂದ್ರಬಾರೋ	11
7.	ಬಾರೋ ನಮ್ಮ ಮನೆಗೆ	11
8.	ಕೋರಿ ಕರೆವೆ ಗುರು	12
9.	ರಾಯ ಬಾರೋ ರಾಘವೇಂದ್ರ ಬಾರೋ	12
10.	ರಾಯ ಬಾರೋ ತಂದೆ ತಾಯಿ ಬಾರೋ	13
11.	ಬಂದಾನು ರಾಘವೇಂದ್ರ	14
12.	ಬೃಂದಾವನ ನೋಡಿರೊ ಗುರುಗಳು	14
13.	ರಥವನೇರಿದ ರಾಘವೇಂದ್ರ	15
14.	ಭೋಯತಿ ವರದೇಂದ್ರ	16
15.	ಚಂದ್ರಗುಣಸಾಂದ್ರ	16
16.	ತುಂಗಾತೀರ ವಿರಾಜಂ	17
17.	ರೋಗಹರನೆ ಕೃಪಾ	17
18.	ಕರೆದರೆ ಬರಬಾರದೆ	18
19.	ಪಾಲಿಸು ಪಾಲಿಸು	18
20.	ಗುರುರಾಘವೇಂದ್ರ ತೀರ್ಥನೀತ	19
21.	ಸ್ಮರಿಸೂ ಗುರುಗಳ ಮನವೇ	20
22.	ಇದನೆ ಬೇಡುವೆ ರಾಘವೇಂದ್ರ	21

23.	108 ಅಷ್ಟೋತ್ತರ ಶತನಾಮ ಸ್ಮರಣೆ	22–24
24.	ಮೊದಲೊಂದಿಪೆ ನಿನಗೆ ಗಣನಾಥ	25
25.	ಶರಣು ಸಿದ್ಧಿವಿನಾಯಕ	25
26.	ಗಜವನದ ಪಾವನ	26
27.	ಪಾಲಿಸೆ ನೀ ಎನ್ನನು	26
28.	ಶರಣ ಜನರನ್ನೆಲ್ಲಾ ಪೊರೆವ ಭಾರತಿ	27
29.	ನೀಲ ಲೋಹಿತ ಪಾಲಾಯಮಾಂ	28
30.	ನಮಃ ಪಾರ್ವತಿ ಪತಿನುತ ಜನಪರ	29
31.	ಧವಳಗಂಗೆಯ ಗಂಗಾಧರ	30
32.	ದಯಮಾಡೆ ದಯಮಾಡೆ	30
33.	ಭಾರತಿ ದೇವಿಯ ನೆನೆನೆನೆ	31
34.	ಶರಣೆಂಬೆವಾಣಿ ಪೊರೆಯೆ ಕಲ್ಯಾಣಿ	31
35.	ಅಂಜಿಕೆನ್ಯಾತಕಯ್ಯಾ	32
36.	ಕೂಸಿನ ಕಂಡೀರ	32
37.	ನಂಬಿದೆ ನಿನ್ನ ಪಾದ	33
38.	ಪವಮಾನ ಜಗದ ಪ್ರಾಣ	35
39.	ಏನು ಧನ್ಯಳೋ	37
40.	ಪಾಲಿಸೆ ಪದುಮಾಲಯೆ	37
41.	ಭಾಗ್ಯದ ಲಕ್ಷ್ಮೀ ಬಾರಮ್ಮ	38
42.	ಬಾರೋ ವೆಂಕಟರಮಣ	39
43.	ದೇವ ಬಂದಾ ನಮ್ಮ ಸ್ವಾಮಿ	39
44.	ಬಂದ ಕೃಷ್ಣ ಚೆಂದದಿಂದ	40
45.	ಹರಿ ಸಂಕೀರ್ತನೆ	40
46.	ಕೇಶವ ನಾಮ	41–42
47.	ತೂಗಿರೆ ರಾಯರ	43
48.	ಮನ್ನಾರು ಕೃಷ್ಣಗೆ	43
49.	ಶ್ರೀಪತಿಯು ನಮಗೆ	44

ಸತತ ಗಣನಾಥ

ಸತತ ಗಣನಾಥ ಸಿದ್ಧಿಯನೀವ ಕಾರ್ಯದಲಿ
ಮತಿ ಪ್ರೇರಿಸುವಳು ಪಾರ್ವತಿ ದೇವಿಯು
ಮುಕುತಿ ಪಥಕೆ ಮನವೀವ ಮಹರುದ್ರದೇವರು
ಹರಿ ಭಕುತಿದಾಯಕಳು ಭಾರತೀದೇವಿ
ಯುಕುತಿ ಶಾಸ್ತ್ರಗಳಲ್ಲಿ ವನಜ ಸಂಭವನರಸಿ
ಸತ್ ಕರ್ಮಗಳ ನಡೆಸಿ ಸುಜ್ಞಾನ ಮತಿ ಇತ್ತು
ಗತಿಪಾಲಿಸುವ ನಮ್ಮ ಪವಮಾನನೂ
ಚಿತ್ತದಲ್ಲಿ ಆನಂದ ಸುಖವನೀವಳು ರಮಾ
ಭಕ್ತಜನರೊಡೆಯ ನಮ್ಮ ಪುರಂದರ ವಿಠಲನು
ಸತತ ಇವರೊಳು ನಿಂತು ಈ ಕೃತಿಯ ನಡೆಸುವನು

ಗುರು ಮಧ್ವರಾಯರಿಗೆ

ಗುರು ಮಧ್ವರಾಯರಿಗೆ ನಮೋ ನಮೋ ನಮ್ಮ
ಗುರು ಮಧ್ವ ಸಂತತಿಗೆ ನಮೋ ನಮೋ
ಶ್ರೀಪಾದರಾಜರಿಗೆ ಗುರುವ್ಯಾಸ ರಾಜರಿಗೆ
ಗುರು ವಾದಿರಾಜರಿಗೆ ನಮೋ ನಮೋ ॥೧॥

ರಾಘವೇಂದ್ರರಾಯರಿಗೆ ವೈಕುಂಠದಾಸರಿಗೆ
ಪುರಂದರರದಾಸರಿಗೆ ನಮೋ ನಮೋ
ಗುರು ವಿಜಯದಾಸರಿಗೆ ಭಾಗಣ್ಣದಾಸರಿಗೆ
ರಂಗವಲಿದ ದಾಸರಿಗೆ ನಮೋ ನಮೋ ॥೨॥

ಪರಮ ವೈರಾಗ್ಯಶಾಲಿ ತಿಮ್ಮಣ್ಣದಾಸರಿಗೆ
ಹುಂಡೆಕಾರ ದಾಸರಿಗೆ ನಮೋ ನಮೋ
ಗುರು ಶ್ರೀಶವಿಠಲನ ಪರಮ ಭಕ್ತರ ಚರಣ
ಸರಸಿಜ ಯುಗಗಳಿಗೆ ನಮೋ ನಮೋ ॥ ೩ ॥

ಶ್ರೀ ಜಗನ್ನಾಥ ದಾಸವರ್ಯ ವಿರಚಿತ

ಶ್ರೀ ಹರಿಕಥಾಮೃತಸಾರ

॥ ಶ್ರೀಃ ॥

॥ ಮಂಗಳಾಚರಣ ಸಂಧಿ ॥

ಹರಿಕಥ–ಅಮೃತ–ಸಾರ, ಗುರುಗಳ ಕರುಣದಿಂದ–ಅಪನಿತು ಪೇಳುವೆ,
ಪರಮ ಭಗವದ್ಭಕ್ತರು, ಇದನ ಆದರದಿ ಕೇಳುವುದು ॥

ಶ್ರೀರಮಣಿ ಕರ–ಕಮಲ ಪೂಜಿತ ಚಾರು–ಚರಣ ಇರೋಜ,
ಬ್ರಹ್ಮ–ಸಮೀರ–ವಾಣಿ–ಫಣೀಂದ್ರ–ವೀಂದ್ರ–ಭವ–ಇಂದ್ರ ಮುಖ ವಿನುತ
ನೀರಜಭವ–ಅಂಡ ಉದಯ ಸ್ಥಿತಿ ಕಾರಣನೆ, ಕೈವಲ್ಯ ದಾಯಕ,
ನಾರಸಿಂಹನೆ ನಮಿಪೆ, ಕರುಣಿಪುದು ಎಮಗೆ ಮಂಗಳವ ॥೧॥

ಜಗದ–ಉದರನ ಅತಿ–ವಿಮಲ ಗುಣ–ರೂಪಗಳನು, ಆಲೋಚನದಿ,
ಭಾರತ ನಿಗಮ–ತತಿಗಳ ಅತಿಕ್ರಮಿಸಿ, ಕ್ರಿಯಾ–ವಿಶೇಷಗಳ,
ಬಗೆ ಬಗೆಯ ನೂತನವ ಕಾಣುತ, ಮಿಗೆ ಹರುಷದಿಂ ಪೊಗಳಿ ಹಿಗ್ಗುವ,
ತ್ರಿಗುಣಮಾನಿ ಮಹಾ–ಲಕುಮಿ ಸಂತೈಸಲಿ ಅನುದಿನವು ॥೨॥

ನಿರುಪಮ–ಆನಂದ–ಆತ್ಮ, ಭವ ನಿರ್ಜರ ಸಭಾಸಂಸೇವ್ಯ,
ಋಜಗಣದ ಅರಸೆ, ಸತ್ವಪ್ರಚುರ, ವಾಣೀಮುಖಸರೋಜೇನ,
ಗರುಡ ಶೇಷ ಶಶಾಂಕದಳ ಶೇಖರರ ಜನಕ, ಜಗದ್ಗುರುವೇ,
ತ್ವಚ್ಚರಣಗಳಿಗೆ ಅಭಿವಂದಿಸುವೆ, ಪಾಲಿಪುದು ಸನ್ಮತಿಯ ॥ ೩ ॥

ಆರು-ಮೂರು-ಎರಡು-ಒಂದು ಸಾವಿರ ಮೂರು-ಎರಡು ಶತಶ್ವಾಸ ಜಪಗಳ,
ಮೂರು ವಿಧ ಜೀವರೊಳಗೆ ಅಬ್ಜ ಜ ಕಲ್ಪ ಪರಿಯಂತ ತಾ ರಚಿಸಿ,
ಸತ್ವರಿಗೆ ಸುಖ, ಸಂಸಾರ ಮಿಶ್ರರಿಗೆ
ಅಧಮಜನರಿಗೆ ಆಪಾರ ದುಃಖಗಳ ಈವ, ಗುರು ಪವಮಾನ ಸಲಹೆಮ್ಮ ॥೪॥
ಕೃತಿರಮಣ ಪ್ರದ್ಯುಮ್ನ ನಂದನೆ,
ಚತುರ-ವಿಂಶತಿ ತತ್ವಪತಿ ದೇವತೆಗಳಿಗೆ ಗುರುವೆನಿಸುತಿಹ ಮಾರುತನ ನಿಜಪತ್ನಿ,
ಸತತ ಹರಿಯಲಿ-ಗುರುಗಳಲಿ ಸದ್ಭಕ್ತಿಯ ಪಾಲಿಸಿ,
ಭಾಗವತ-ಭಾರತ ಪುರಾಣ ರಹಸ್ಯ ತತ್ವಗಳು, ಅರುಪು ಕರುಣದಲಿ ॥ ೬ ॥

ವೇದಪೀಠ, ವಿರಿಂಚಿ-ಭವ-ಶಕ್ರ ಆದಿ ಸುರ ವಿಜ್ಞಾನ ದಾಯಕ,
ಮೋದ-ಚಿನ್ಮಯ ಗಾತ್ರ, ಲೋಕಪವಿತ್ರ, ಸುಚರಿತ್ರ
ಛೇದ-ಭೇದ-ವಿಷಾದ-ಕುಟಿಲ-ಅಂತ-ಆದಿ-ಮಧ್ಯ ವಿದೂರ,
ಆ-ದಾ-ನ ಆದಿ ಕಾರಣ ಬಾದರಾಯಣ ಪಾಹಿ ಸತ್ರಾಣ ॥ ೭ ॥

ಕ್ಷಿತಿಯೊಳಗೆ ಮಣಿಮಂತ ಮೊದಲಾದ ಅತಿ ದುರಾತ್ಮರು,
ಒಂದು-ಅಧಿಕ ವಿಂಶತಿ ಕುಭಾಷ್ಯವ ರಚಿಸೆ,
ನಡುಮನೆಯೆಂಬ ಬ್ರಾಹ್ಮಣನ ಸತಿಯ ಜಠರದೊಳು ಅವತರಿಸಿ ಭಾರತಿರಮಣ,
ಮಧ್ವ ಅಭಿಧಾನದಿ, ಚತುರದಶ ಲೋಕದಲಿ ಮೆರೆದ, ಅಪ್ರತಿಮಗೆ ಒಂದಿಸುವೆ ॥೮॥

ಪಂಚಭೇದಾತ್ಮಕ ಪ್ರಪಂಚಕೆ, ಪಂಚರೂಪ-ಆತ್ಮಕನೆ ದೈವಕ,
ಪಂಚಮುಖ ಶಕ್ರಾದಿಗಳು ಕಿಂಕರರು ಶ್ರೀಹರಿಗೆ,
ಪಂಚವಿಂಶತಿ ತತ್ವ ತರತಮ, ಪಂಚಿಕೆಗಳನು ಪೇಳ್ದ,
ಭಾವಿ ವಿರಿಂಚಿಯೆನಿಪ ಆನಂದತೀರ್ಥರ, ನೆನೆವೆನನುದಿನವು ॥ ೯ ॥

ವಾಮದೇವ, ವಿರಿಂಚಿತನಯ, ಉಮಾಮನೋಹರ, ಉಗ್ರ, ಧೂರ್ಜಟಿ,
ಸಾಮಜಾಜಿನ ವಸನ ಭೂಷಣ, ಸುಮನಸ-ಉತ್ತಂಸ, ಕಾಮಹರ,
ಕೈಲಾಸ ಮಂದಿರ, ಸೋಮ-ಸೂರ್ಯ-ಅನಲ ವಿಲೋಚನ,
ಕಾಮಿತಪ್ರದ, ಕರುಣಿಸೆಮಗೆ ಸದಾ ಸುಮಂಗಲವ ॥ ೧೦ ॥

ಕೃತ್ತಿಪಾಸನೆ, ಹಿಂದೆ ನೀ ನಾಳ್ವತ್ತು ಕಲ್ಪಸಮೀರನಲಿ ಶಿಷ್ಯತ್ವ ವಹಿಸಿ–
ಅಖಿಳ ಆಗಮಾರ್ಥಗಳೋದಿ,
ಜಲಧಿಯೊಳು ಹತ್ತು ಕಲ್ಪದಿ ತಪವ ಗೈದು,
ಆದಿತ್ಯರೊಳಗೆ ಉತ್ತಮವೆನಿಸಿ,
ಪುರುಷೋತ್ತಮನ ಪರಿಯಂಕ ಪದವೈದಿದೆಯೋ, ಮಹದೇವ ॥೧೧॥

ಪಾಕಶಾಸನ ಮುಖ್ಯ ಸಕಲ ದಿವೌಕಸರಿಗೆ ಅಭಿನಮಿಪೆ,
ಋಷಿಗಳಿಗೆ, ಏಕ ಚಿತ್ತದಿ ಪಿತೃಗಳಿಗೆ, ಗಂದರ್ವ–ಕ್ಷಿತಿಪರಿಗೆ,
ಆ ಕಮಲನಾಭಾದಿ ಯತಿಗಳ (ಅ)ನೀಕಕಾನಮಿಸುವೆನು ಬಿಡದೆ,
ರಮಾ ಕಳತ್ರನ ದಾಸವರ್ಗಕೆ ನಮಿಪೆನು, ಅನವರತ ॥ ೧೨ ॥

ಪರಿಮಳವು ಸುಮನದೊಳಗೆ, ಅನಲನು ಅರಣಿಯೊಳಗೆ ಇಪ್ಪಂತೆ,
ದಾಮೋದರನು, ಬ್ರಹ್ಮಾದಿಗಳ ಮನದಲಿ ತೋರಿತೋರದಲೆ ಇರುತಿಹ,
(ಇರುತಿಹ) ಜಗನ್ನಾಥ ವಿಠಲನ ಕರುಣ ಪಡೆವ ಮುಮುಕ್ಷುಜೀವರು,
ಪರಮ ಭಾಗವತರನು ಕೊಂಡಾಡುವುದು ಪ್ರತಿದಿನವು ॥೧೩॥

॥ ಇತಿ ಶ್ರೀಮಂಗಳಾಚರಣ ಸಂಧಿ ಸಂಪೂರ್ಣಂ ॥
॥ ಶ್ರೀ ಕೃಷ್ಣಾರ್ಪಣಮಸ್ತು ॥

ವಿಜಯ ಕವಚ

ಸ್ಮರಿಸಿ ಬದುಕಿರೋ ದಿವ್ಯ ಚರಣಕೆರಗಿರೋ ।
ದುರಿತ ತರಿದು ಪೊರೆವ ವಿಜಯ ಗುರುಗಳೆಂಬರ । ಪ ।

ದಾಸರಾಯನ ದಯವ ಸೂಸಿ ಪಡೆದನ । ದೋಷರಹಿತನ ಸಂತೋಷಭರಿತ । ೧ ।

ಜ್ಞಾನವಂತನ ಬಲು ನಿಧಾನಿ ಶಾಂತನ। ಮಾನ್ಯವಂತನ ಬಹುವದಾನ್ಯ ದಾತನ । ೨ ।

ಹರಿಯ ಭಜಿಸುವ ನರಹರಿಯ ಯಜಿಸುವ। ದುರಿತ ತ್ಯಜಿಸುವ ಜನಕೆ ಹರುಷ ಸುರಿಸುವ।೩।

ಮೋದಭರಿತನ ಪಂಚಭೇದವರಿತನ । ಸಾಧು ಚರಿತನ ಮನೋವಿಷಾದ ಮರೆತನ ।೪।

ಇವರ ನಂಬಿದ ಜನಕೆ ಭವವಿದೆಂಬುದು । ಹವಣವಾಗದು ನಮ್ಮವರು ಮತವಿದು ।೫।

ಪಾಪಕೋಟಿಯ ರಾಶಿ ಲೇಪವಾಗದು । ತಾಪ ಕಳೆವನು ಬಲು ದಯಾಪಯೋನಿಧಿ ।೬।

ಕವನರೂಪದಿ ಹರಿಯ ಸ್ತವನ ಮಾಡಿದ । ಭುವನ ಚರಿಸಿದ ಮಾಧವನ ನೋಡಿದ ।೭।

ರಂಗನೆಂದನ ಭವವು ಹಿಂಗಿತೆಂದನ । ಮಂಗಳಾಂಗನ ಅಂತರಂಗವರಿತನ ।೮।

ಕಾಶಿನಗರದಲ್ಲಿದ್ದ ವ್ಯಾಸದೇವನ । ದಯವ ಸೂಸಿ ಪಡೆದನ ಉಲ್ಲಾಸತನದಲಿ ।೯।

ಚಿಂತೆ ಬೇಡಿರೋ ನಿಶ್ಚಿಂತರಾಗಿರೊ । ಶಾಂತ ಗುರುಗಳ ಪಾದವಂತು ನಂಬಿರೊ ।೧೦।

ಖೇದವಾಗದು ನಿಮಗೆ ಮೋದವಾಹುದು । ಆದಿದೇವನ ಸುಪ್ರಸಾದವಾಹುದು ।೧೧।

ತಾಪ ತಡೆವನು ಬಂದ ಪಾಪ ಕಡಿವನು । ಶ್ರೀಪತೀಶನ ಪದಸಮೀಪವಿಡುವನು ।೧೨।

ವೇದ ಓದಲು ಬರಿದೆ ವಾದ ಮಾಡಲು । ಹಾದಿ ದೊರೆಯದು ಬುಧರ ಪಾದ ನಂಬದೆ ।೧೨।

ಗಂಗೆ ಮಿಂದರೆ ಮಲವು ಹಿಂಗಿತಲ್ಲದೆ । ರಂಗನೊಲಿಯನು ಭಕ್ತರ ಸಂಗ ದೊರೆಯದೆ ।೧೪।

ಲೆಕ್ಕವಿಲ್ಲದಾ ದೇಶ ತುಕ್ಕಿ ಬಂದರು । ದುಃಖವಲ್ಲದೆ ಲೇಶ ಭಕ್ತಿ ದೊರಕದು ।೧೫।

ದಾನ ಮಾಡಲು ದಿವ್ಯಗಾನ ಪಾಡಲು । ಜ್ಞಾನ ದೊರೆಯದು ಇವರಧೀನವಾಗದೆ ।೧೬।

ನಿಷ್ಠೆಯಾತಕೆ ಕಂಡ ಕಷ್ಟವ್ಯಾತಕೆ । ದಿಟ್ಟ ಗುರುಗಳ ಪಾದ ಮುಟ್ಟಿ ಭಜಿಸಿರೊ ।೧೭।

ಪೂಜೆ ಮಾಡಲು ಕಂಡ ಗೋಜು ಬೀಳಲು । ಬೀಜ ಮಾತಿನ ಫಲ ಸಹಜ ದೊರಕದು ।೧೮।

ಸುರರು ಎಲ್ಲರು ಇವರ ಕರವ ಪಿಡಿವರೂ । ತರಳರಂದದಿ ಹಿಂದೆ ತಿರುಗುತಿಪ್ಪರು ।೧೯।

ಗ್ರಹಗಳೆಲ್ಲವು ಇವರ್ಗೆ ಸಹಾಯ ಮಾಡುತ। ಅಹೋರಾತ್ರಿಲಿ ಸುಖದ ನಿವಹ ಕೊಡುವವು।೨೦।

ವ್ಯಾಧಿಬಾರದೊ ದೇಹಬಾಧೆ ತಟ್ಟದೊ । ಆದಿದೇವನ ಸುಪ್ರಸಾದವಾಹುದೊ ।೨೧।ಗ

ಕರುಣದಿಂದಲಿ ಎಮ್ಮ ಪೊರೆವನಲ್ಲದೆ । ದುರಿತ ಕೋಟಿಯ ಬೇಗ ತರಿವ ದಯದಲಿ ।೨೩।

ಮಂದಮತಿಗಳು ಇವರ ಛಂದವರಿಯದೆ । ನಿಂದಿಸುವರು ಭವದ ಬಂಧ ತಪ್ಪದು ।೨೪।

ಇಂದಿರಾಪತಿ ಇವರ ಮುಂದೆ ಕುಣಿವನು । ಅಂದ ವಚನವ ನಿಜಕೆ ತಂದು ತೋರ್ಪನು ।೨೫।

ಉದಯಕಾಲದಿ ಈ ಪದವ ಪಠಿಸಲು । ಮದಡನಾದರೂ ಜ್ಞಾನ ಉದಯವಾಹುದು ।೨೬।

ಸಟೆಯಿದಲ್ಲವೊ ವ್ಯಾಸವಿಠಲ ಬಲ್ಲನೂ । ಪಠಿಸಬಹುದಿದು ಕೇಳಿ ಕುಟಿಲರಹಿತರು ।೨೭।

॥ ಶ್ರೀ ಗುರು ರಾಜೋವಿಜಯತೇ ॥

॥ ಶ್ರೀ ಕೃಷ್ಣಾವಧೂತ ಕೃತ ॥

ಅಕ್ಷರಮಾಲಿಕಾ ಸ್ತೋತ್ರ

ಅಜ್ಞಾನನಾಶಾಯ ವಿಜ್ಞಾನಪೂರ್ಣಾಯ ಸುಜ್ಞಾನದಾತ್ರೇ ನಮಸ್ತೇ ಗುರೋ । ಶ್ರೀರಾಘ । 1 ।

ಆನಂದರೂಪಾಯ ನಂದಾತ್ಮಜ ಶ್ರೀಪದಾಂಭೋಜಭಾಜೇ ನಮಸ್ತೇ ಗುರೋ । ಶ್ರೀರಾಘ । 2 ।

ಇಷ್ಟಪ್ರದಾನೇನ ಕಷ್ಟಪ್ರಹಾನೇನ ಶಿಷ್ಟಸ್ತುತ ಶ್ರೀಪದಾಂಭೋಜಭೋ । ಶ್ರೀರಾಘ । 3 ।

ಈಡೇ ಭವತ್ಪಾದ ಪಾಥೋಜಮಾಧ್ಯಾಯ ಭೂಯೋಪಿ ಭೂಯೋ ಭಾಯಾತ್ಪಾಹಿಭೋ । ಶ್ರೀರಾಘ । 4 ।

ಉಗ್ರಂಪಿಶಾಚಾದಿಕಂ ದ್ರಾವಯಿತ್ವಾಶು ಸೌಖ್ಯಂಜನಾನಾಂ ಕರೋಷೀಶಭೋ । ಶ್ರೀರಾಘ । 5 ।

ಊರ್ಜತ್ಕೃಪಾಪೂರ ಪಾಥೋನಿಧೇಮಂಕ್ಷುತುಷ್ಟೋನುಗೃಣ್ಹಾಸಿ ಭಕ್ತಾನ್ವಿಭೋ । ಶ್ರೀರಾಘ । 6 ।

ಋಜೂತ್ತಮಪ್ರಾಣ ಪಾದಾರ್ಚನಪ್ರಾಪ್ತ ಮಾಹಾತ್ಮ್ಯಸಂಪೂರ್ಣ ಸಿದ್ಧೇಶಭೋ । ಶ್ರೀರಾಘ । 7 ।

ೠಭುಸ್ಥಭಾವಾಪ್ತಭಕ್ತೇಷ್ಟಕಲ್ಪದ್ರು ರೂಪೇಶ ಭೂಪಾದಿ ವಂದ್ಯ ಪ್ರಭೋ । ಶ್ರೀರಾಘ । 8 ।

ೠದ್ಧಂಯಶಸ್ತೇವಿಭಾತಿ ಪ್ರಕೃಷ್ಟಂ ಪ್ರಪನ್ನಾರ್ತಿಹಂತರ್ಮಹೋದಾರಭೋ । ಶ್ರೀರಾಘ । 9 ।

ಕ್ಲೃಪ್ತಾತಿಭಕ್ತೌಘ ಕಾಮ್ಯರ್ಥದಾತರ್ಭವಾಂಭೋಧಿಪಾರಂಗತ ಪ್ರಾಜ್ಞ ಭೋ । ಶ್ರೀರಾಘ । 10 ।

ಏಕಾಂತಭಕ್ತಾಯ ಮಾಕಾಂತ ಪಾದಾಬ್ಜ ಉಚ್ಚಾಯ ಲೋಕೇ ನಮಸ್ತೇ ವಿಭೋ । ಶ್ರೀರಾಘ । 11 ।

ಐಶ್ವರ್ಯಭೂಮನ್ ಮಹಾಭಾಗ್ಯದಾಯಿನ್ ಪರೇಷಾಂಚಕೃತ್ಯಾದಿನಾಶಿನ್ ಪ್ರಭೋ । ಶ್ರೀರಾಘ । 12 ।

ಓಂಕಾರ ವಾಚ್ಯಾರ್ಥಭಾವೇನ ಭಾವೇನ ಲಭ್ಧೋದಯಶ್ರೀಕಯೋಗೀಶಭೋ । ಶ್ರೀರಾಘ । 13 ।

ಔರ್ವಾನಲಪ್ರಖ್ಯ ದುರ್ವಾದಿದಾವಾನಲ್ಯೈಃ ಸರ್ವತಂತ್ರಸ್ವತಂತ್ರೇಶಭೋ । ಶ್ರೀರಾಘ । 14 ।

ಅಂಭೋಜಸಂಭೂತ ಮುಖ್ಯಾಮರಾರಾಧ್ಯ ಭೂನಾಥಭಕ್ತೇಶ ಭಾವಾಜ್ಞ ಭೋ । ಶ್ರೀರಾಘ । 15 ।

ಅಸ್ತಂಗತಾನೇಕ ಮಾಯಾದಿವಾದೀಶ ವಿದ್ಯೋತಿತಾಶೇಷ ವೇದಾಂತಭೋ । ಶ್ರೀರಾಘ । 16 ।

ಕಾಮ್ಯಾರ್ಥದಾನಾಯ ಬದ್ಧಾದರಾಶೇಷಲೋಕಾಯ ಸೇವಾನುಸಕ್ತಾಯಭೋ । ಶ್ರೀರಾಘ । 17 ।

ಖದ್ಯೋತಸಾರೇಷು ಪ್ರತ್ಯರ್ಥಿಸಾರ್ಥೇಷು ಮಾಧ್ಯಹ್ನಮಾರ್ತಾಂಡ ಬಿಂಬಾಭಭೋ । ಶ್ರೀರಾಘ । 18 ।

ಗರ್ವಿಷ್ಠಗರ್ವಾಂಬುಶೋಷಾರ್ಯಮಾತ್ಯುಗ್ರನಮ್ರಾಂಬುಧೇರ್ಯಾಮಿನೀನಾಥಭೋ । ಶ್ರೀರಾಘ । 19 ।

ಘೋರಾಮಯಧ್ವಾಂತ ವಿಧ್ವಂಸನೋದ್ದಾಮದೇದೀಪ್ಯಮಾನಾರ್ಕ ಬಿಂಬಾಭಭೋ । ಶ್ರೀರಾಘ । 20 ।

ಙಣತ್ಕಾರದಂಡಾಂಕ ಕಾಷಾಯ ವಸ್ತ್ರಾಂಕ ಕೌಪೀನಪೀನಾಂಕ ಹಂಸಾಂಕಭೋ । ಶ್ರೀರಾಘ । 21 ।

ಚಂಡೀಶ ಕಾಂಡೇಶ ಪಾಖಂಡವಾಕ್ಕಾಂಡ ತಾಮಿಶ್ರಮಾರ್ತಾಂಡ ಪಾಷಾಂಡಭೋ । ಶ್ರೀರಾಘ । 22 ।

ಛದ್ಮಾಣುಭಾಗಂ ನವಿದ್ಮಸ್ತ್ವದಂತಃ ಸುಸದ್ಮೈವಪದ್ಮಾವಧಮ್ಯಾಸಿಭೋ । ಶ್ರೀರಾಘ । 23 ।

ಜಾಡ್ಯಂಹಿನಸ್ತಿಜ್ವರಾರ್ಶಃಕ್ಷಯದ್ಯಾಶು ತೇಪಾದಪದ್ಮಾಂಬುಲೇಶೋಪಿಭೋ । ಶ್ರೀರಾಘ । 24 ।

ಝಷಧ್ವಜೀಯೇಷ್ವಲಭ್ಯೋರುಚೇತಃ ಸಮಾರೂಢಮಾರೂಢವಕ್ಷೋಂಗಭೋ । ಶ್ರೀರಾಘ । 25 ।

ಞಂಚಾವಿಹೀನಾಯ ಯಾದೃಚ್ಛಿಕಪ್ರಾಪ್ತತುಷ್ಟಾಯ ಸದ್ಯಃ ಪ್ರಸನ್ನೋಸಿಭೋ । ಶ್ರೀರಾಘ । 26 ।

ಟೀಕಾರಹಸ್ಯಾರ್ಥವಿಖ್ಯಾಪನಗ್ರಂಥ ವಿಸ್ತಾರಲೋಕೋಪಕರ್ತ್ರಃ ಪ್ರಭೋ । ಶ್ರೀರಾಘ । 27 ।

ಠಂಕುರ್ವರೀಣಾಮಮೇಯಪ್ರಭಾವೋದ್ಧರಾಪಾದಸಂಸಾರತೋಮಾಂ ಪ್ರಭೋ । ಶ್ರೀರಾಘ । 28 ।

ಡಾಕಿನ್ಯಪಸ್ಮಾರಘೋರಾಧಿಕೋಗ್ರ ಗ್ರಹೋಚ್ಚಾಟನೋದಗ್ರವೀರಾಗ್ರ್ಯಭೋ । ಶ್ರೀರಾಘ । 29 ।

ಢಕ್ಕಾಧಿಕದ್ವಾನವಿದ್ರಾವಿತಾನೇಕ ದುರ್ವಾದಿಗೋಮಾಯು ಸಂಘಾತಭೋ । ಶ್ರೀರಾಘ । 30 ।

ಣಾತ್ಮಾದಿಮಾತ್ರಾರ್ಣಲಕ್ಷ್ಯಾರ್ಥಕ ಶ್ರೀಪತಿಧ್ಯಾನಸನ್ನದ್ಧಧೀಸಿದ್ಧಭೋ । ಶ್ರೀರಾಘ । 31 ।

ತಾಪತ್ರಯ ಪ್ರೌಢಬಾಧಾಬಿ ಭೂತಸ್ಯ ಭಕ್ತಸ್ಯ ತಾಪತ್ರಯಂ ಹಂಸಿಭೋ । ಶ್ರೀರಾಘ । 32 ।

ಸ್ಥಾನತ್ರಯ ಪ್ರಾಪಕಜ್ಞಾನದಾತಸ್ತಿಧಾಮಾಂಘ್ರಿಭಕ್ತಿಂ ಪ್ರಯಚ್ಛಪ್ರಭೋ । ಶ್ರೀರಾಘ । 33 ।

ದಾರಿದ್ರ್ಯ ದಾರಿದ್ರ್ಯ ಯೋಗೇನ ಯೋಗೇನ ಸಂಪನ್ನ ಸಂಪತ್ತಿಮಾದೇಹಿಭೋ । ಶ್ರೀರಾಘ । 34 ।

ಧಾವಂತಿತೇನಾಮಧೇಯಾಭಿಸಂಕೀರ್ತನೇನೈನಸಾಮಾಶು ವೃಂದಾನಿಭೋ । ಶ್ರೀರಾಘ । 35 ।

ನಾನಾವಿಧಾನೇಕ ಜನ್ಮಾದಿದುಃಖೌಘತಃ ಸಾಧ್ವಸಂ ಸಂಹರೋದಾರಭೋ । ಶ್ರೀರಾಘ । 36 ।

ಪಿತಾತ್ವಮೇವೇತಿ ಮಾತಾತ್ವಮೇವೇತಿ ಮಿತ್ರಂತ್ವಮೇವೇತ್ಯಹಂ ವೇದ್ಮಿಭೋ । ಶ್ರೀರಾಘ । 37 ।

ಫಾಲಸ್ಥದುರ್ದೈವ ವರ್ಣಾವಳೀಕಾರ್ಯಲೋಪೇಪಿ ಭಕ್ತಸ್ಯಶಕ್ತೋಸಿಭೋ । ಶ್ರೀರಾಘ । 38 ।

ಬದ್ಧೋಸ್ಮಿಸಂಸಾರಪಾಶೇನ ತೇಂಘ್ರಿಂವಿನಾನ್ಯಾಗತಿರ್ನೇತ್ಯಮೇಮಿ ಪ್ರಭೋ । ಶ್ರೀರಾಘ । 39 ।

ಭಾವೇಭಜಾಮೀಹ ವಾಚಾವದಾಮಿತ್ವದೀಯಂಪದಂ ದಂಡವನ್ನಾಮಿಭೋ । ಶ್ರೀರಾಘ । 40 ।

ಮಾನ್ಯೇಷುಮಾನ್ಯೋಸಿ ಮತ್ಯಾಚ ಧೃತ್ಯಾಚ ಮಾಮದ್ಯಮಾನ್ಯಂ ಕುರುದ್ರಾಗ್ವಿಭೋ । ಶ್ರೀರಾಘ । 41 ।

ಯಂಕಾಮ ಮಾಕಾಮಯೇ ತನ್ನ ಜಾಪಂತತಸ್ತ್ವಂ ಶರಣ್ಯೋಭವೇತ್ಯೇಮಿಭೋ । ಶ್ರೀರಾಘ । 42 ।

ರಾಜಾದಿವಶ್ಯಾದಿಕುಕ್ಷಿಂಭರಾನೇಕ ಚಾತುರ್ಯವಿದ್ಯಾ ಸುಮೂಢೋಸ್ಮಿಭೋ । ಶ್ರೀರಾಘ । 43 ।

ಲಕ್ಷೇಷುತೇ ಭಕ್ತವರ್ಗೇಷು ಕುರ್ವೇಕಲಕ್ಷ್ಯಂ ಕೃಪಾಪಾಂಗಲೇಶಸ್ಯಮಾಂ । ಶ್ರೀರಾಘ । 44 ।

ವಾರಾಂಗನಾದ್ಯೂತ ಚೌರ್ಯಾನ್ಯಡಾರಾತ ರತ್ವಾದ್ಯವದ್ಯತ್ವತೋಮಾಂಪ್ರಭೋ । ಶ್ರೀರಾಘ । 45 ।

ಶಕ್ತೋನಶಕ್ತಿಂ ತವಸ್ತೋತು ಮಾಧ್ಯಾತು ಮೀದೃಕ್ವಹಂ ಕರೋಮೀಶಃ ಪ್ರಭೋ । ಶ್ರೀರಾಘ । 46 ।

ಷಡ್ವೈರಿವರ್ಗಂ ಮಮಾರಾನ್ನಿರಾಕುರ್ವ ಮಂದೋಹರೀರಾಂಘ್ರಿ ರಾಗೋಸ್ತುಭೋ । ಶ್ರೀರಾಘ । 47 ।

ಸನ್ಮಾರ್ಗ ಸಚ್ಛಾಸ್ತ್ರ ಸತ್ಸಂಗ ಸದ್ಭಕ್ತಿ ಸಜ್ಞಾನ ಸಂಪತ್ತಿ ಮಾದೇಹಿಭೋ । ಶ್ರೀರಾಘ । 48 ।

ಹಾಸ್ಯಾಸ್ಪದೋಹಂ ಸಮಾನೇಷ್ವಕೀರ್ತ್ಯಾತವಾಂಘ್ರಿಂ ಪ್ರಪನ್ನೋಸ್ಮಿ ಸಂರಕ್ಷಭೋ । ಶ್ರೀರಾಘ । 49 ।

ಲಕ್ಷ್ಮೀವಿಹೀನತ್ವಹೇತೋಃ ಸ್ವಕೀಯೈಃ ಸುದೂರೀಕೃತೋಸ್ಮ್ಯದ್ಯ ವಾಚ್ಯೋಸ್ಮಿಭೋ । ಶ್ರೀರಾಘ । 50 ।

ಕ್ಷೇಮಂಕರಸ್ತ್ವಂ ಭವಾಂಭೋಧಿ ಮಜ್ಜಜ್ಜನಾನಾಮಿತಿತ್ವಾಂ ಪ್ರಪನ್ನೋಸ್ಮಿಭೋ । ಶ್ರೀರಾಘ । 51 ।

ಕೃಷ್ಣಾವಧೂತೇನ ಗೀತೇನ ಮಾತ್ರಕ್ಷರಾದ್ಯೇನಗಾಥಾಸ್ತವೇನೇಡ್ಯಭೋ । ಶ್ರೀರಾಘ । 52 ।

ಇತಿ ಶ್ರೀಮತ್ಕೃಷ್ಣಾವದೂತಕೃತೌ ಶ್ರೀಮದ್ರಾಘವೇಂದ್ರತಂತ್ರೇ ಪ್ರತ್ಯಕ್ಷಸಿದ್ಧಿಪ್ರದೇ
ಗಾಥಾಸ್ತುತಿರ್ನಾಮ ಪ್ರದಕ್ಷಿಣಾಪದ್ಯಾವಲಿರಿತಿ ಏಕಾದಶಃ ಪಟಲಃ

ಶ್ರೀ ರಾಘವೇಂದ್ರ ಬಾರೋ

ಶ್ರೀ ರಾಘವೇಂದ್ರ ಬಾರೋ ಕಾರುಣ್ಯ ವಾರಿಧಿ ಬಾರೋ । ಪ ।
ಆರಾಧಿಪ ಭಕ್ತರಭೀಷ್ಟ ಪೂರೈಸುವ ಪ್ರಭುವೇ ಬಾರೋ । ಅ ।

ರಾಜವಂಶೋದ್ಭವನ ಪಾದ ರಾಜೀವಭೃಂಗನೆ ಬಾರೋ ।
ರಾಜಾಧಿರಾಜರೊಳು ವಿರಾಜಿಸುವ ಚಲುವ ಬಾರೋ । ೧ ।

ವ್ಯಾಸರಾಯನೆನಿಸಿ ನೃಪನ ಕ್ಲೇಶ ಕಳೆದವನೆ ಬಾರೋ ।
ಶ್ರೀ ಸುಧೀಂದ್ರ ಕರಸಂಜಾತ ವಾಸುದೇವಾರ್ಚಕನೆ ಬಾರೋ । ೨ ।

ಸನ್ಯಾಸಕುಲದೀಪ ಬಾರೋ ಸನ್ನುತ ಮಹಿಮನೆ ಬಾರೋ ।
ಮಾನ್ಯ ಜಗನ್ನಾಥ ವಿಠ್ಠಲನ ಪ್ರಪನ್ನ ಜನರ ಪ್ರೀಯನೆ ಬಾರೋ । ೩ ।

ಬಾರೋ ನಮ್ಮ ಮನೆಗೆ

ಬಾರೋ ನಮ್ಮ ಮನೆಗೆ ಶ್ರೀ ರಾಘವೇಂದ್ರ, ಬಾರೋ ನಮ್ಮ ಮನೆಗೆ । ಪ ।
ಬಾರೋ ದುಃಖಪಹಾರ ಬಾರೋ ದುರಿತ ದೂರ ।
ಬಾರಯ್ಯ ಸನ್ಮಾರ್ಗ ದಾರಿತೋರುವ ಗುರುವೆ ।ಅ।
ಬಾಲ ಪ್ರಹ್ಲಾದನಾಗಿ ಖೂಳ ಕಶ್ಯಪುವಿಗೆ । ಲೋಲ ಶ್ರೀ ನರಹರಿ ಕಾಲರೂಪವ ತಾಳಿದ ।
ವ್ಯಾಸನಿರ್ಮಿತ ಗ್ರಂಥ ಮಧ್ವಕೃತ ಬಾಷ್ಯವ । ಬೇಸರದೆ ಓದಿ ಬರೆದೆ ವ್ಯಾಸಮುನಿಯೆ ।೧।
ಭೂತ ಪ್ರೇತಗಳ ಘಾತಿಸಿ ಬಿಡುವಂಥ । ಖ್ಯಾತಿಯುತ ಯತಿನಾಥನೇ ಸ್ತುತಿಸುವೆ ।
ಕುಷ್ಟರೋಗಾದಿಗಳ ನಷ್ಟಮಾಡುವಂಥ । ಅಷ್ಟಮಹಿಮೆಯುತ ಶ್ರೇಷ್ಠ ಮುನಿಯೆ । ೨ ।
ಕರೆದರೆ ಬರುವಿಯೆಂಬೋ ಕೀರುತಿ ಕೇಳಿನಾ । ಕರೆವೆನು ಕರುಣದಿ ಕರವಪಿಡಿಯೋ ।
ಭಕ್ತವತ್ಸಲನೆಂಬ ಬಿರುದು ನಿಂದಾದರೆ । ಸಕ್ತನ ಮೊರೆ ಕೇಳೋ ಮಧ್ವೇಶ ವಿಠಲ ದಾಸ ।೩।

ಕೋರಿ ಕರೆವೆ ಗುರು

ಕೋರಿ ಕರೆವೆ ಗುರು ಶ್ರೀರಾಘವೇಂದ್ರನೆ । ಬಾರೋ ಮಹಾಪ್ರಭುವೇ । ಪ ।
ಚಾರುಚರಣಯುಗ ಸಾರಿ ನಮಿಪೆ ಬೇಗ । ಬಾರೋ ಹೃದಯಸುಜಸಾರ ರೂಪವ ತೋರೊ । ಅ ।

ಎಲ್ಲಿ ನೋಡಲು ಹರಿ ಅಲ್ಲೆ ಕಾಣುವನೆಂದು । ಕ್ಷುಲ್ಲ ಕಂಭವನೊಡೆದು ।
ನಿಲ್ಲದೆ ನರಹರಿ ಚೆಲ್ವಿಕೆ ತೋರಿದ । ಫುಲ್ಲಲೋಚನ ಶಿಶು ಪ್ರಹ್ಲಾದನಾಗಿ ಬಾರೋ । ೧ ।

ದೋಷ ಕಳೆದು ಸಿಂಹಾಸನವೇರಿದ । ದಾಸ ಕುಲವ ಪೊರೆದ ।
ಶ್ರೀಶನರ್ಚಕನಾಗಿ ಪೋಷಿಸಿ ಹರಿಮತ । ವ್ಯಾಸತ್ರಯವಗ್ಯೆದ ವೇಶ ತಳೆದು ಬಾರೋ । ೨ ।

ಈ ಸಮಯದಿ ಎನ್ನಾಸೆ ನಿನ್ನೊಳು ಬಲು । ಸೂಸಿ ಹರಿಯುತಿಹುದು ।
ಕೂಸಿಗೆ ಜನನಿ ನಿರಾಶೆಗೊಳಿಸುವಳೆ । ದೋಷಕಳೆದು ವಿಠ್ಠಲೇಶ ಹೃದಯ ಬಾರೋ । ೩ ।

ರಾಯ ಬಾರೋ ರಾಘವೇಂದ್ರ ಬಾರೋ

ರಾಯ ಬಾರೋ ರಾಘವೇಂದ್ರ ಬಾರೋ ।
ಜೀಯನೀನಲ್ಲದೆ ಇನ್ನಾರು ಕಯ್ವರು ॥

ಸಲ್ಹಾದಣ್ಣನೆ ಬಾರೋ ಪ್ರಲ್ಹಾದರಾಯ ಬಾರೋ ।
ಬಾಹ್ಲೀಕರಾಜನಾಗಿ ಮೆರೆದಂತ ಪ್ರಭುವೇ ಬಾರೋ ॥

ತುಂಗವಾಸಾಮುನಿ ಪುಂಗವ ನೀ ಭಕ್ತ ಜಂಗುಳಿ ಪಾಲಿಸಲು
ಸಂಗೀತಪ್ರಿಯನೆ ಬಾರೋ ।
ಶ್ರೀಕರುಣಾಸಿಂದು ಬಾರೋ ಸಾಕಬೇಕಯ್ಯ ಬಂದು
ಶ್ರೀಕರ ಶ್ರೀಧವಿಠಲನ ತೋರು ಬಾರೋ ॥

ರಾಯ ಬಾರೋ ತಂದೆ ತಾಯಿ ಬಾರೋ

ರಾಯ ಬಾರೋ ತಂದೆ ತಾಯಿ ಬಾರೋ ।
ನಮ್ಮನು ಕಾಯಿ ಬಾರೊ ।
ಮಾಯಿಗಳಮರ್ದಿಸಿದ ರಾಘವೇಂದ್ರ ॥
ವಂದಿಪ ಜನರಿಗೆ ಮಂದಾರ ತರುವಂತೆ ।
ಕುಂದದ ಭೀಷ್ಟವ ಕೊಡುತಿರ್ಪರಾಯ ಬಾರೋ
ಕುಂದದ ಭೀಷ್ಟವ ಕೊಡುತಿರ್ಪರಾಯ ಬಾರೋ ।
ಮಂದನ ಮತಿಗೆ ರಾಘವೇಂದ್ರ ಗುರು ॥ ೩ ॥
ಆರು ಮೂರು ಏಳು ನಾಲ್ಕು ಎಂಟು ಗ್ರಂಥದ
ಸಾರಾರ್ಥ ತೋರಿದೆ ಸರ್ವರಿಗೆ ನ್ಯಾಯದಿಂದಾ ।
ಸಾರಾರ್ಥ ತೋರಿದೆ ಸರ್ವರಿಗೆ ನ್ಯಾಯದಿಂದಾ ।
ಸೂರಿಗಳರಸನೆ ರಾಘವೇಂದ್ರ ಗುರು ॥ ೧ ॥
ರಾಮ ಪದಾಂಬುಜ ಸತ್ ಬೃಂಗ
ಕೃಪಾಪಾಂಗ ಭ್ರಾಮಕ ಜನರ ಮಾನ ಭಂಗ
ಭ್ರಾಮಕ ಜನರ ಮಾನಭಂಗ ಮಾಡಿದ
ಧೀಮಂತರೊಡೆಯನೆ ರಾಘವೇಂದ್ರ ಗುರು ॥ ೨ ॥
ಭಾಸುರ ಚರಿತನೆ ಭೂಸುರ ವಂದ್ಯನೆ ಶ್ರೀಸುಧೀಂದ್ರರಾಯರ
ವರ ಪುತ್ರ ರಾಯ ಬಾರೋ ।
ಶ್ರೀ ಸುಧೀಂದ್ರರಾಯರ ವರಪುತ್ರ ವರಯೋಗಿ
ದೈಶೀಕರೊಡೆಯನೆ ರಾಘವೇಂದ್ರ ಗುರು ॥ ೪ ॥
ಭೂತಳ ನಾಥನ ಭೀತಿಯ ಬಿಡಿಸಿದಿ ।
ಪ್ರೇತತ್ವ ಕಳೆದೆ ಮಹಿಷಿಯಾ ಮಹಾಮಹಿಮ
ಪ್ರೇತತ್ವ ಕಳೆದೆ ಮಹಿಷಿಯ ಮಹಾಮಹಿಮ
ಜಗನ್ನಾಥ ವಿಠಲನ ಪ್ರೀತಿ ಪಾತ್ರರಾಯ ಬಾರೋ ॥ ೫ ॥

ಬಂದಾನು ರಾಘವೇಂದ್ರ

ಬಂದಾನು ರಾಘವೇಂದ್ರ । ಇಂದಿಲ್ಲಿಗೆ । ಪ ।
ಕಂದನ ಮೊರೆಕೇಳಿ ಜನನಿಯು ಬರುವಂತೆ । ಅ ।

ಗಜವೇರಿ ಬಂದಾ ಜಗದಿ ತಾ ನಿಂದಾ ।
ಅಜಪಿತರಾಮನ ಪದಾಬ್ಜ ಸ್ಮರಿಸುತಲಿ । ೧ ।

ಹರಿಯ ಕುಣಿಸುತ ಬಂದಾ ನರಹರಿಪ್ರಿಯ ಬಂದಾ ।
ಶರಣಾಗತರನು ಕರವಪಿಡಿವೆನೆಂದು । ೨ ।

ಪ್ರಹ್ಲಾದ ವ್ಯಾಸ ಮುನೀಂದ್ರ ರಾಘವೇಂದ್ರ ।
ನಿಲಿಸುತ ಮನವ ಮಧ್ವೇಶವಿಠ್ಠಲನಲ್ಲಿ । ೩ ।

ಬೃಂದಾವನ ನೋಡಿರೊ ಗುರುಗಳ

ಬೃಂದಾವನ ನೋಡಿರೊ ಗುರುಗಳ ।
ಬೃಂದಾವನ ನೋಡಿ ಆನಂದ ಮದವೇರಿ
ಚಂದದಿ ದ್ವಾದಶ ಪೌಂಡ್ರಾಂಕಿತಗೊಂಬ ॥
ತುಂಗಭದ್ರಾ ನದಿಯ ತೀರದಿ ಇಪ್ಪ ।
ತುಂಗ ಮಂಟಪ ಮಧ್ಯದಿ ॥
ಶೃಂಗಾರ ತುಳಸಿ ಪದಮಾಕ್ಷ ಸರಗಳಿಂದ ।
ಮಂಗಳಕರ ಮಹಾ ಮಹಿಮೆಯಿಂದೊಪ್ಪುವ ॥೧॥
ದೇಶದೇಶದಿ ಮೆಚ್ಚುತಾ ಇಲ್ಲಿಗೆ ಬಂದು । ವಾಸವಾಗಿ ಸೇವಿಪ ॥
ಭಾಷೆ ಕೊಟ್ಟಂದದಿ ಬಹುವಿಧ ವರಗಳ ।
ಸೂಸುವ ಕರ ಮಹಾಮಹಿಮೆಯಿಂದೊಪ್ಪುವ ॥೨॥
।ನಿತ್ಯ ಸನ್ನಿಧಿ ಸೇವಿಪಾ ಭಕ್ತರಿಗೆಲ್ಲಾ ಮತ್ತಭೀಷ್ಟವ ಕೊಡುತ್ತಾ
ಸತ್ಯಾದಿ ಗುಣಸಿಂಧು ವೆಂಕಟ ವಿಠಲನ್ನ ।
ನಿತ್ಯ ಸನ್ನಿಧಿಯಲ್ಲಿ ನಿರುತ ಪೂಜೆಯ ಗೊಂಬ ॥೩॥

ರಥವನೇರಿದ ರಾಘವೇಂದ್ರ

ರಥವನೇರಿದ ರಾಘವೇಂದ್ರ ಸದ್ಗುಣಗಣಸಾಂದ್ರ ॥
ಸತತ ಮಾರ್ಗದಿ ಸಂತತ ಸೇವಿಪರಿಗೆ ।
ಅತಿ ಹಿತದಲಿ ಮನೋರಥವ ಕೊಡುವೆನೆಂದು ॥
ಚತುರ ದಿಕ್ಕು ದಿಕ್ಕುಗಳಲ್ಲಿ ಚರಿಪ ಜನರಲ್ಲಿ ।
ಮಿತಿಯಿಲ್ಲದೆ ಬಂದು ಓಲೈಸುತಲಿ, ವರಗಳ ಬೇಡುತಲಿ ।
ನುತಿಸುತ ಪರಿಪರಿ ನತರಾಗಿಹರಿಗೆ ॥
ಗತಿ ಪೇಳದೆ ಸರ್ವಥಾ ನಾ ಬಿಡೆನೆಂದು ॥
ಅತುಲ ಮಹಿಮನು ಆ ದಿನದಲ್ಲಿ ದಿತಿಜ ವಂಶದಲಿ ।
ಉತುಪತ್ತಿಯಾಗಿ ಉಚಿತದಲಿ ಉತ್ತಮ ಮತಿಯಲಿ ॥
ಅತಿಶಯ ವಿರುತಿರೆ ಪಿತನ ಬಾದೆಗಳು ।
ಮನ್ಮಥ ಪಿತನೊಲಿಸಿದ ಜಿತ ಕರುಣದಲಿ ॥
ಪ್ರಥಮ ಪ್ರಹ್ಲಾದ ವ್ಯಾಸ ಮುನಿಯೆ ಯತಿ ರಾಘವೇಂದ್ರ ।
ಪತಿತೋದ್ಧಾರಿಯೇ ಪಾವನಕಾರಿಯೆ ಕರ ಮುಗಿವೆನು ದೊರೆಯೇ ।
ಕ್ಷಿತಿಯೊಳು ಗೋಪಾಲವಿಠಲನ ಸ್ಮರಿಸುತ
ಪ್ರತಿ ಮಂತ್ರಾಲಯದೊಳು ಅತಿ ಮೆರೆಯುವೆ ॥

ಭೋಯತಿ ವರದೇಂದ್ರ

ಭೋಯತಿ ವರದೇಂದ್ರ ಶ್ರೀ ಗುರುರಾಯ ರಾಘವೇಂದ್ರ ।
ಕಾಯೋ ಎನ್ನ ಶುಭಕಾಯ ಭಜಿಸುವೆನು ಕಾಯೋ ತವಕ ಚಂದ್ರ ॥
ನೇಮವು ಎನಗೆಲ್ಲಿ ಇರುವುದು ಕಾಮಾಧಮನಲ್ಲಿ ।
ಶ್ರೀ ಮಹಾಮಹಿಮನೇ ಪಾಮರ ನಾ ನಿಮ್ಮ ನಾಮವೊಂದೇ ಬಲ್ಲೇ॥೧॥
ಕಂಡ ಕಂಡ ಕಡೆಗೆ ತಿರುಗಿ ನಾ ಬೆಂಡಾದೆನು ಕೊನೆಗೆ ।
ಕಂಡ ಕಂಡವರ ಕೊಂಡಾಡುತ ನಿಮ್ಮ ಕಂಡೆ ಕಟ್ಟ ಕಡೆಗೆ ॥೨॥
ಮಂತ್ರವ ನಾನರಿಯೇ ಶ್ರೀಮನ್ ಮಂತ್ರಾಲಯ ದೊರೆಯೇ ।
ಅಂತರಂಗದೊಳು ನಿಂತು ಪ್ರೇರಿಸೋ ಅನಂತಾದ್ರೀಶ ದೊರೆಯೆ ॥೩॥

ಚಂದ್ರಗುಣಸಾಂದ್ರ

ಚಂದ್ರ ಗುಣಸಾಂದ್ರ ರಾಘವೇಂದ್ರ
ಸದ್ವೈಷ್ಣವ ಕುಮುದಕೆ ।
ಶ್ರೀ ರಘುರಾಮ ಪದಾಂಬುಜ ಭೃಂಗ ।
ಮಾರುತ ಮತ ಶುಭವಾರಿನಿಧಿಗೆ ಪೂರ್ಣ ॥೧॥

ಶ್ರೀ ಕರಹರಿಯ ನಿರಾಕರಿಸುವ ದುಷ್ಟ ।
ಭೀಕರ ಮಾಯ್ಗಳ ಮುಖಕಮಲಕೆ ಪೂರ್ಣ ॥೨॥

ವರದ ಗೋಪಾಲ ವಿಠಲನ ವಾರುತೆಗೆ ।
ಹರುಷ ಬಡುವ ಹರಿ ಭಕುತಚಕೋರಕೆ ॥೩॥

ತುಂಗಾತೀರ ವಿರಾಜಂ

ತುಂಗಾತೀರ ವಿರಾಜಂ ಭಜಮನಃ ।
ರಾಘವೇಂದ್ರ ಗುರುರಾಜಂ ಭಜಮನಃ ।

ಮಂಗಳಕರ ಮಂತ್ರಾಲಯ ವಾಸಂ ।
ಶೃಂಗಾರಾನನ ವಿಲಸಿತ ಹಾಸಂ ॥

ರಾಘವೇಂದ್ರಯತಿ ರಾಜಂ ಭಜಮನಃ ।
ತುಂಗಾತೀರ ವಿರಾಜಂ ಭಜಮನಃ ।

ಕರಧೃತ ದಂಡ ಕಮಂಡಲು ಮಾಲಂ ।
ಸುರಚಿತ ಚೇಲಂ ಧೃತ ಮಣಿ ಮಾಲಂ ॥

ನಿರುಪಮ ಸುಂದರ ಕಾಯ ಸುಶೀಲಂ ।
ವರ ಕಮಲೇಶಾರ್ಪಿತ ನಿಜ ಸಕಲಂ ॥

ರೋಗಹರನೆ ಕೃಪಾ

ರೋಗಹರನೆ ಕೃಪಾ ಸಾಗರ ಶ್ರೀ ಗುರು
ರಾಘವೇಂದ್ರ ಪರಿಪಾಲಿಸೋ ॥

ಸಂತತ ದುರ್ವಾದಿದ್ವಾಂತದಿವಾಕರ ।
ಸಂತ ವಿನುತ ಮಾತ ಲಾಲಿಸೋ ॥

ಪಾವನ ಗಾತ್ರ ಭೂದೇವವರನೆ ತವ ।
ಸೇವಕ ಜನರೊಳಗಾಡಿಸೋ ॥

ಘನ್ನ ಮಹಿಮ ಜಗನ್ನಾಥ ವಿಠಲ ಪ್ರಿಯ ।
ನಿನ್ನಾರಾಧನೆ ಮಾಡಿಸೋ ॥

ಕರೆದರೆ ಬರಬಾರದೆ

ಕರೆದರೆ ಬರಬಾರದೆ
ವರಮಂತ್ರಾಲಯ ಪುರಮಂದಿರ ತವ ।
ಚರಣ ಸೇವಕರು ಕರವ ಮುಗಿದು ॥

ಹರಿದಾಸರು ಸುಸ್ವರಸಮ್ಮೇಳದಿ ।
ಪರವಶದಲಿ ಬಾಯ್ದೆರೆದು ಕೂಗಿ ॥

ಪೂಶರಪಿತ ಕಮಲೇಶ ವಿಠಲನ ।
ದಾಸಾಗ್ರೇಸರರೀ ಸಮಯದಿ ॥

ಪಾಲಿಸು ಪಾಲಿಸು

ಪಾಲಿಸು ಪಾಲಿಸು, ಮಂತ್ರಾಲಯ ಗುರುವೆ
ನಿಮ್ಮ ಪಾದವ ನಂಬಿದೆ ಎನ್ನನ್ನು ಕೈ ಬಿಡದೆ ॥

ಪಾದ ತೀರ್ಥದಿ ಪಾಪಗಳನೇ ನೀಗಿದೆ ।
ಕೀರ್ತಿಪೆನು ನಿಮ್ಮ ಪಾವನ ತುಂಗ ವಾಸ ॥

ಭಕ್ತರ ಭಾದಿಪೊ ಬಹುವಿದ ವ್ಯಾದಿಗಳ್ ।
ಯುಕ್ತಿಯಿಂದಲಿ ಶಮನಗೈವೆ ಗುರುರಾಘವೇಂದ್ರ ॥

ಮಂಗಳಕರ ಮಂತ್ರಾಲಯ ಮಂದಿರ ।
ಕಂಗಳ ನೋಟದಿ ಕರುಣೀಸೊ ಸುಂದರ ವಿಠಲ ॥

ಗುರುರಾಘವೇಂದ್ರ ತೀರ್ಥನೀತ

ರಾಘವೇಂದ್ರ ತೀರ್ಥನೀತ – ರಾಜಿಸುವಾತಾ ವಿರಾಜಿಸುವಾತಾ ।
ಬಣ್ಣಬಣ್ಣದಿಂದ ಬಹಳ ಬೋಧಿಸುವಾತ – ಬಹಳ ।
ಸಣ್ಣ ದೊಡ್ಡ ಬೀಷ್ಟಗಳನ್ನು ಸಾಧಿಸುವಾತಾ ॥
ಪುಣ್ಯವಂತರಿಂದ ಬಹುಪೂಜೆಗೊಂಬಾತಾ – ನಮಗೆ ।
ಕಣ್ಣಹಬ್ಬವಾಗುವಂತೆ ಕಾಣಿಸುವಾತಾ ॥

ಕಾಮಕ್ರೊಧಾದಿಗಳನೆ ಕಾಲಲೊದ್ದಾತಾ – ಈತ ।
ವ್ಯೊಮಕೇಶನಂತೆ ನಾಲ್ಕು ವೇದ ಪ್ರಖ್ಯಾತಾ ॥

ಭೂಮಿಯೊಳು ದುರ್ವಾದಿಗಳನೆ ಭೂರಿ ಗೆದ್ದಾತ
ಶ್ರೀ ಯೋಗೀಂದ್ರ ತೀರ್ಥರೇ ಶಿಷ್ಯರೆಂಬಾತಾ ॥

ಸಿದ್ಧವಿದ್ಯೆಗಳಲ್ಲಿ ಬಹುಪ್ರಸಿದ್ಧನಾದಾತ – ನಮಗೆ
ಮಧ್ವಶಾಸ್ತ್ರಗಳನೆ ತಾ ಹೇಳಿ ಕೊಟ್ಟಾತ
ಮಧ್ವೇಶವಿಠಲನ ಧ್ಯಾನದಲಿದ್ದಾತ – ಶ್ರೀ ತುಂಗ
ಭದ್ರತೀರದಲ್ಲಿ ವಾಸವಾದಾತ

ಸ್ಮರಿಸೂ ಗುರುಗಳ ಮನವೇ

ಸ್ಮರಿಸೂ ಗುರುಗಳ ಮನವೇ । ಸ್ಮರಿಸೂ ಗುರುಗಳ ॥ ಪ ॥
ಸ್ಮರಿಸೂ ಗುರುಗಳ ನಿನಗೆ । ಪರಮ ಮಂಗಳ ।
ದುರಿತ ಪರ್ವತಕ್ಕೆ ಪವಿಯೆಂದು ತಿಳಿದು ॥ಅ.ಪ॥

ಉರಗವೃಷ್ಚಿಕ ವ್ಯಾಘ್ರ ಅರಸೂ ಚೋರಾಗ್ನಿ ।
ಕರಿಗರಳ ಜ್ವರ ಮಾಡಲಾದ ಭಯಗಳಿಂದ ॥
ಪೊರೆದು ಮಂಗಳವೀವ ನರಹರಿಯ ದಾಸರ ।
ಚರಣ ಕುಂಡೆನೋ ದುರಿತ ಪರಿಹಾರವಾಯಿತು ॥೧॥

ಗುರು ಸ್ಮರಣೆಯಿಂದ ಸಕಲ ಆಪತ್ತು ಪರಿಹಾರ ।
ಗುರು ಸ್ಮರಣೆಯಿಂದ ಸಕಲ ಸಂಪದವು ಎನಗೇ ॥
ಗುರು ಸ್ಮರಣೆಯಿಂದ ವಿಶೇಷ ಧನ ದೊರಕುವುದು ।
ಗುರು ಸ್ಮರಣೆಯಿಂದ ಹರಿ ಒಲಿದು ಪೊರೆವಾ ॥೨॥

ಗುರುಗಳಿಂತದಿಕ ಇನ್ಯಾರೋ ಆಪ್ತರು ನಿನಗೆ ।
ಗುರುಗಳೇ ಪರಮ ಹಿತಕರು ನೋಡು ॥
ಗುರುಸ್ವಾಮಿ ವರದ ಗೋಪಾಲವಿಠಲ ಸರ್ವ
ದುರಿತಗಳ ಕಳೇವನು ಹಿತಗರೆವ ನೋಡು ॥೩॥

ಇದನೆ ಬೇಡುವೆ ರಾಘವೇಂದ್ರ

ಇದನೆ ಬೇಡುವೆ ರಾಘವೇಂದ್ರ ಗುರು ರಾಯ ।
ಸದಮನಂತಕರಣ ದೃಢ ಭಕುತಿ ಜ್ಞಾನ ॥

ನಿನ್ನ ಸೇವೆಯು ಬೇಕು, ಅನ್ಯ ಹಂಬಲ ಬೇಡ ।
ನಿನ್ನ ರಘುಪತಿಯ ಸತತ ಸ್ಮರಣೆ ಬೇಕು ॥
ನಿನ್ನ ಹರಿದಾಸರ ದಾಸ್ಯವನು ಕೊಡಬೇಕು ॥
ನನ್ನದೆಮ್ಮಹಂಕಾರವನು ಬಿಡಸಬೇಕು ॥

ನಿನ್ನ ನಿಜ ಭಕ್ತ ಜನ ಸಹವಾಸವಿರಬೇಕು ।
ನಿನ್ನ ದ್ವೇಷಿಗಳಿಂದ ದೂರಿರಿಸಬೇಕು ॥
ನಿನ್ನ ಹಸ್ತೋದಕದ ಅಮೃತನವನುಣಿಸಿ ।
ನಿನ್ನ ಪಾದೋದಕವನೂ ಕುಡಿಸಬೇಕು ॥

ಮಧ್ವಮತ ಸಿದ್ಧಾಂತ ಮನನ ಮಾಡಿಸಬೇಕು ।
ಶುದ್ಧ ತತ್ವ ಜ್ಞಾನ ಸುಧೆಯುಣಿಸಬೇಕು ॥
ಕ್ಷುದ್ರವಾದ ವಿಚಾರ ದುರ್ಬುದ್ಧಿ ಬರದಂತೆ
ತಿದ್ದಿ ಭೂಪತಿ ವಿಠಲನ ತೋರಬೇಕು ॥

ಶ್ರೀ ರಾಘವೇಂದ್ರ ಸ್ವಾಮಿಗಳ ನಾಮಾವಳಿ
(108) ಅಷ್ಟೋತ್ತರ ಶತನಾಮ ಸ್ಮರಣೆ

ಜಯ ಜಯವೀವೆ ರಾಘವೇಂದ್ರ । ಭವ ಭಯನಾಶಕ ರಾಘವೇಂದ್ರ ॥
ತುಂಗಾ ತೀರದಿ ರಾಘವೇಂದ್ರ। ಮಂಗಳ ಮಹಿಮನೆ ರಾಘವೇಂದ್ರ ॥
ಅಂಗರಹಿತರಿಗೆ ರಾಘವೇಂದ್ರ। ತಿಮ್ಮಣ್ಣನ ಸುತ ರಾಘವೇಂದ್ರ ॥
ಕಂಗಳಿಲ್ಲದವರಿಗೆ ರಾಘವೇಂದ್ರ । ಬೊಮ್ಮ ಮಾರುತಿಪ್ರಿಯ ರಾಘವೇಂದ್ರ ॥
ವೇಂಕಟನಾಮಕ ರಾಘವೇಂದ್ರ । ಸಂಕಟಹಾರಕ ರಾಘವೇಂದ್ರ ॥
ವೀಣಾ ಪಂಡಿತ ರಾಘವೇಂದ್ರ । ಗಾಣ ವಿಶಾರದ ರಾಘವೇಂದ್ರ ॥
ಸರಸ್ವತಿಯಪತಿ ರಾಘವೇಂದ್ರ । ಸರಸ್ವತಿ ವಿದ್ಯಾ ರಾಘವೇಂದ್ರ ॥
ಕುಂಭಕೋಣವಾಸ ರಾಘವೇಂದ್ರ । ಸುಧೀಂದ್ರ ಶಿಷ್ಯ ರಾಘವೇಂದ್ರ ॥
ಪರಿಮಳ ಪಂಡಿತ ರಾಘವೇಂದ್ರ । ಭಾಷ್ಯಾಕಾರ ಗುರು ರಾಘವೇಂದ್ರ ॥
ಶಿಷ್ಯರ ವಿದ್ಯೆ ರಾಘವೇಂದ್ರ । ಆಯಾಸದಿಂ ಬರೆ ರಾಘವೇಂದ್ರ ॥
ಗಂಧವ ತೆಗೆಯೆನೆ ರಾಘವೇಂದ್ರ । ಆಗ್ನಿ ಸೂಕ್ತದಿಂ ರಾಘವೇಂದ್ರ ॥
ವಿಪ್ರರು ಲೇಪಿಸೆ ರಾಘವೇಂದ್ರ । ಕ್ಷಿಪ್ರದಿ ಮೈಯುರಿ ರಾಘವೇಂದ್ರ ॥
ಶರಣು ಹೋಗಲು ರಾಘವೇಂದ್ರ । ವರುಣಸೂಕ್ತದಿಂಧ ರಾಘವೇಂದ್ರ॥
ಚಂದನವಾಯಿತು ರಾಘವೇಂದ್ರ । ಸುತನಿಗೆ ಮುಂಜಿಯು ರಾಘವೇಂದ್ರ ॥
ಸನ್ಯಾಸಿಯಾಗಲು ರಾಘವೇಂದ್ರ । ಶಾರದೆಯಾಜ್ಞೆಯು ರಾಘವೇಂದ್ರ ॥
ಆಶ್ರಮ ಧರಿಸಿದ ರಾಘವೇಂದ್ರ । ಪಿಶಾಚಿಯಾಗೆ ಸತಿ ರಾಘವೇಂದ್ರ ॥

ಮೋಕ್ಷವ ಗೈಸಿದೆ ರಾಘವೇಂದ್ರ । ಚತುಃಷಷ್ಟಿ ಕಲೆಯಿಂದ ರಾಘವೇಂದ್ರ ॥
ಆತುಳ ಪ್ರಕಾಶನು ರಾಘವೇಂದ್ರ । ಮೊದಲಿನ ಗುರು ರಾಘವೇಂದ್ರ ॥
ಯಾದವೇಂದ್ರರು ರಾಘವೇಂದ್ರ । ಅಧಿಕಾರ ನಮ್ಮದು ರಾಘವೇಂದ್ರ ॥
ಅಧಿಕ ತೊಂದರೆ ಕೊಡೆ ರಾಘವೇಂದ್ರ । ಹರಿಯ ಸ್ಮರಿಸಲು ರಾಘವೇಂದ್ರ॥
ಪರಿಹಾರವಾಯಿತು ರಾಘವೇಂದ್ರ । ಬಡವೆಂಕಣ್ಣಗೆ ರಾಘವೇಂದ್ರ ॥
ಒಡೆಯನ ದಯೆಯಿಂದ ರಾಘವೇಂದ್ರ। ದಿವಾನಗಿರಿ ಬರೆ ರಾಘವೇಂದ್ರ ॥
ದಿವಾನ ದೊರೆಗಳ ರಾಘವೇಂದ್ರ । ಮುಸಲ್ಮಾಣ ದೊರೆ ರಾಘವೇಂದ್ರ ॥
ತಟ್ಟೆಲಿ ಭೋಜನ ರಾಘವೇಂದ್ರ । ಬಟ್ಟೆಯ ಮುಚ್ಚಿರೆ ರಾಘವೇಂದ್ರ ॥
ತೀರ್ಥ ಪ್ರೋಕ್ಷಿಸ ರಾಘವೇಂದ್ರ । ತಟ್ಟೆಲಿ ಫಲಪುಷ್ಪ ರಾಘವೇಂದ್ರ ॥
ವಂದಿಸಿದನು ದೊರೆ ರಾಘವೇಂದ್ರ । ಮಾನ್ಯಗಳನು ಕೂಡೆ ರಾಘವೇಂದ್ರ ॥
ದೊರೆಯಾ ನೆನಪಿಗೆ ರಾಘವೇಂದ್ರ । ಗೋಪುರವಿರಿಸಿದ ರಾಘವೇಂದ್ರ ॥
ವೆಂಕಣ್ಣಗೆ ಪೇಳೆ ರಾಘವೇಂದ್ರ । ಮಾಧವಾರದಿ ರಾಘವೇಂದ್ರ ॥
ಕೆರೆ ಏರಿಯ ಮೇಲೆ ರಾಘವೇಂದ್ರ । ಕರಿಯಾ ಶಿಲೆಯೊಳು ರಾಘವೇಂದ್ರ॥
ವೃಂದಾವನ ಮಾಡಿ ರಾಘವೇಂದ್ರ । ಉಳೀದಾ ಶಿಲೆಯೊಳು ರಾಘವೇಂದ್ರ॥
ಮಾರುತಿಯನು ಮಾಡಿ ರಾಘವೇಂದ್ರ । ಕೀರುತಿ ಪಡೆದನು ರಾಘವೇಂದ್ರ॥
ಉತ್ತಮ ದಿನದೊಳು ರಾಘವೇಂದ್ರ। ಶಿಷ್ಯರಿಗ್ಹೇಳುತ ರಾಘವೇಂದ್ರ ॥
ದಕ್ಷಿಣದ್ವಾರದಿ ರಾಘವೇಂದ್ರ । ಆ ಕ್ಷಣ ಹೊಕ್ಕರು ರಾಘವೇಂದ್ರ ॥
ಒಂದು ದಿನ ಶ್ರೀಗಳು ರಾಘವೇಂದ್ರ । ಮದುವೆಗೆ ಶಿಷ್ಯ ಕೇಳೆ ರಾಘವೇಂದ್ರ॥
ಮೃತ್ತಿಕೆ ಕೊಡಲಾಗಿ ರಾಘವೇಂದ್ರ । ದ್ವಿಜಗೆ ಜಗುಲಿಯೊಳಗೆ ರಾಘವೇಂದ್ರ॥
ಬ್ರಹ್ಮ ಪಿಶಾಚವು ರಾಘವೇಂದ್ರ । ಮೃತ್ತಿಕೆ ಭರದಿಂದ ರಾಘವೇಂದ್ರ ॥

ಸುಟ್ಟು ಬೂದಿಯಾಗೆ ರಾಘವೇಂದ್ರ । ಶಿಷ್ಯನ ಮದುವೆಯು ರಾಘವೇಂದ್ರ ॥
ರತ್ನಹಾರ ಭರದಿಂದ ರಾಘವೇಂದ್ರ । ಅಗ್ನಿಯೊಳಿಟ್ಟರು ರಾಘವೇಂದ್ರ ॥
ಹಾರಬೇಕೆನ್ನಲು ರಾಘವೇಂದ್ರ । ಕುಂಡದಿ ತೆಗೆದರು ರಾಘವೇಂದ್ರ ॥
ನೀರಿನವನು ಕೇಳೆ ರಾಘವೇಂದ್ರ । ಮೋಕ್ಷ ಬೇಕೆನ್ನಲು ರಾಘವೇಂದ್ರ ॥
ಮುಕ್ತಿಯನಿತ್ತರು ರಾಘವೇಂದ್ರ । ದೇಶಾಯಿ ಒಂದು ದಿನ ರಾಘವೇಂದ್ರ ॥
ಗುರುಗಳ ಕರೆಸಲು ರಾಘವೇಂದ್ರ । ಮಾವಿನ ರಸದೊಳು ರಾಘವೇಂದ್ರ ॥
ಆಡುವ ಮಗು ಬೀಳೆ ರಾಘವೇಂದ್ರ । ಮಗುಮೃತಿಹೊಂದಲು ರಾಘವೇಂದ್ರ ॥
ಅಂದು ವ್ಯರ್ಥಿಸಿದರು ರಾಘವೇಂದ್ರ । ರಾಮನ ದಯೆಯಿಂದ ರಾಘವೇಂದ್ರ ॥
ಜೀವವನಿತ್ತರು ರಾಘವೇಂದ್ರ । ಪರಿಜನ ಹರುಷದಿ ರಾಘವೇಂದ್ರ ॥
ತರಳನ ಕರೆದರು ರಾಘವೇಂದ್ರ । ಗುರುಗಳು ಕರುಣಿಸಿ ರಾಘವೇಂದ್ರ ॥
ಪ್ರಾಣವನಿತ್ತರು ರಾಘವೇಂದ್ರ । ಒನಿಕೆ ಚಿಗುರಿಸಿ ರಾಘವೇಂದ್ರ ॥
ವಿಪ್ರರಿಗೆ ಸಿರಿ ಬಂತು ರಾಘವೇಂದ್ರ । ಶಿಷ್ಯನ ಮಗನೊಬ್ಬ ರಾಘವೇಂದ್ರ ॥
ಬಿಸಿಲಲಿ ಬಳಲಲು ರಾಘವೇಂದ್ರ । ಶಾಟಿಲಿ ನೆರಳನು ರಾಘವೇಂದ್ರ ॥
ಇಚ್ಛಾ ಭೋಜನ ರಾಘವೇಂದ್ರ । ಜಾತಕ ಬರೆಯಲು ರಾಘವೇಂದ್ರ ॥
ಒಂದುನೂರು ಮನುಜಂಗೆ ರಾಘವೇಂದ್ರ । ಮೂರು ನೂರು ಗ್ರಂಥಕೆ ರಾಘವೇಂದ್ರ॥
ಬೃಂದಾವನ ಕೇಳು ರಾಘವೇಂದ್ರ । ಪರಿಪರಿ ರೋಗಹರ ರಾಘವೇಂದ್ರ ॥
ಜಯ ಜಯ ಮಂಗಳ ರಾಘವೇಂದ್ರ । ನಿತ್ಯಾನಂದದೊಳು ರಾಘವೇಂದ್ರ ॥
ಜಯ ಜಯ ವಿಠಲದಾಸ ರಾಘವೇಂದ್ರ ॥೨॥

– ಮಂಗಳಂ –

ಮೊದಲೊಂದಿಪೆ ನಿನಗೆ ಗಣನಾಥ

ಮೊದಲೊಂದಿಪೆ ನಿನಗೆ ಗಣನಾಥ । ಪ ।
ಬಂದ ವಿಘ್ನ ಕಳೆಯೋ ಗಣನಾಥ । ಅ ।

ಹಿಂದೆ ರಾವಣನು ಮದದಿಂದ ನಿನ್ನ ಪೂಜಿಸದೆ । ಸಂದ ರಣದಲ್ಲಿ ಗಣನಾಥ । ೧ ।

ಆದಿಯಲ್ಲಿ ಧರ್ಮರಾಜ ಪೂಜಿಸಿ ನಿನ್ನಯ ಪಾದ । ಸಾಧಿಸಿದ ರಾಜ್ಯ ಗಣನಾಥ । ೨ ।

ಮಂಗಳ ಮೂರುತಿ ಗುರು ರಂಗವಿಠಲನ ಪಾದ । ಭೃಂಗನೆಂದು ನಮಿಪೆ ಗಣನಾಥ । ೩ ।

ಶರಣು ಸಿದ್ಧಿವಿನಾಯಕ

ಶರಣು ಸಿದ್ಧಿವಿನಾಯಕ । ಶರಣು ವಿದ್ಯ ಪ್ರದಾಯಕ । ಪ ।
ಶರಣು ಪಾರ್ವತಿತನಯ ಮೂರುತಿ । ಶರಣು ಮೂಷಿಕ ವಾಹನ । ಅ ।

ನಿಟಿಲನೇತ್ರನೆ ದೇವಿಸುತನೆ ನಾಗಭೂಷಣ ಪ್ರಿಯನೆ ।
ತಟಿತಟಾಂಕಿತ ಕೋಮಲಾಂಗನೆ ಕರ್ಣಕುಂಡಲಧಾರನೆ । ೧ ।

ಕುಕ್ಷಿ ಮಹಾ ಲಂಬೋದರನೆ ಇಕ್ಷುಚಾಪನ ಗೆಲಿದನೆ ।
ಪಕ್ಷಿವಾಹನ ಸಿರಿಪುರಂದರ ವಿಠಲನ ನಿಜದಾಸನೆ । ೨ ।

ಗಜವದನ ಪಾವನ

ಗಜವದನ ಪಾವನ ವಿಘ್ನನಾಶನ । ಪ ।

ವರ ಪಾಶಾಂಕುಶಧರ ಪರಮ ದಯಾಳೋ । ಕರುಣಾ ಪೂರಿತ ವರಗೌರಿ ಕುಮಾರನೆ । ೧ ।

ಸುಂದರವದನ ಅರವಿಂದನಯನ ಘನ । ಸುಂದರಿ ಕಂದನೆ ಬಂದು ನೀ ರಕ್ಷಿಸೋ । ೨ ।

ಗೋಪಾಲ ವಿಠಲನ ಅಪಾರ ಭಜಕನೆ । ಶಾಪಾನುಗ್ರಹಶಕ್ತ ಅನೇಕ ಮಹಿಮಾ । ೩ ।

ಪಾಲಿಸೆ ನೀ ಎನ್ನನು

ಪಾಲಿಸೆ ನೀ ಎನ್ನನು ಪಾರ್ವತಿದೇವಿ ॥ಪ॥

ಪಾಲಿಸೆ ನಿನ್ನಯ ಪಾಲಿಗೆ ಬಂದೆನು
ಬೀಳುವೆ ಸರ್ವದಾ ನಿನ್ನಯಕಾಲಿಗೆ
ಶರಣೆಂದವರನು ಪೊರೆವಳು ಎಂಬುವ
ಬಿರುದು ನಿನ್ನದು ಎಂದರಿಯನು ಕರುಣದಿ ॥೧॥

ಸನ್ನುತ ಪುರುಷನ ಇನ್ನೆಲ್ಲಿ ಕಾಣೆನು
ಮನ್ಮಥನೆಂಬುವ ಬನ್ನಬಡಿಪ ಬಲು
ಕಾಣೆನು ಶಾಂತಿಯ ಎನೆಂದ್ಹೇಳಲೀ
ಪ್ರಾಣೇಶ ವಿಠಲನು ತಾನೆ ಬಲ್ಲನು ತಾಯೇ ॥೨॥

ಶರಣ ಜನರನ್ನೆಲ್ಲಾ ಪೊರೆವ ಭಾರತಿ

ಶರಣ ಜನರನ್ನೆಲ್ಲಾ ಪೊರೆವ ಭಾರತಿ ನಿನ್ನ ಚರಣಕ್ಕೆ ಕೈ ಮುಗಿವೆ
ತಾಯಿ ನಿನ್ನ ಚರಣಕ್ಕೆ ಕೈ ಮುಗಿವೆ
ಕರೆ ಕರೆಗೊಳಿಸುವ ಕಠಣಭವವವನೆಲ್ಲ ಪರಿಹಾರ ಮಾಡಬೇಕು ಪರಾಕು
ತುತಿಸ ಬಲ್ಲೆನೆ ನಿನ್ನ ಸುತನ ಬಿನ್ನಪ ವನು ॥
ಅತಿಶಯದಿ ಕೇಳಬೇಕು ಈ ವಾಕು ॥
ಮತಿವಂತ ಜನರನ್ನ ಮಾನ್ಲ ಗೊಳಿಸುವಂಥ ।
ಹಿತವಾದ ಭಾಗ್ಲವೀಯೇ ನೀ ಕಾಯೆ ॥

ಕಾಮಾದಿಗಳನ್ನೆಲ್ಲ ಸೀಮದಿ ಗೆಲುವಂಥ ।
ಪ್ರೇಮ ಕವಚ ತೊಡಿಸೆ ಉದ್ಧರಿಸೆ ॥
ಹೇಮ ಕಾಮಿಸಿ ಭೂಮಿ ಹೇಯವಂದೆ ನಿಸೆ ನೀ ।
ಸೋಮಶೇಖರನ ಜನನಿ ಸುಜ್ಞಾನಿ ॥

ಮಾತೆ ಎನ್ನದು ಒಂದು ಮಾತು ಲಾಲಿಸವದು ।
ವಾತನ ನಿಜದಯಿತೆ ಪ್ರಖ್ಯಾತೆ ॥
ದಾತಶ್ರೀ ವರದಗೋಪಾಲ ವಿಠಲನ
ಅತುಮದೊಳು ನಿಲಿಸೆ ಸುಮನಸೇ

ನೀಲ ಲೋಹಿತ ಪಾಲಾಯಮಾಂ

ನೀಲ ಲೋಹಿತ ಪಾಲಯಮಾಂ ನೀಲ ಲೋಹಿತ
ಪಾಲ ನಯನ ಶುಂಡಾಲ ಚರ್ಮಸುದು ಕೂಲಮ್ಮೈಡನೆ
ನೀಪಾಲಿಸು ಕರುಣದಿ ॥ಪ॥

ನಂದಿವಾಹನ ನಮಿಪೆ ಖಳ ವೃಂದ ಮೋಹನ
ಅಂದಕರಿಪು ಶಿಖಿ ಸ್ಕಂದನ ಸನಕಸ ನಂದನಾದಿಮುನಿವಂದಿತ
ಪದಯುಗ ॥೧॥

ಸೋಮಶೇಖರಾ ಗಿರಿತಾ ಸುತ್ರಾಮಲೇಖರಾ
ಸ್ತೋಮ ವಿನುತ ಭವ ಭೀಮ ಭಯಂಕರ ಕಾಮಾಹಿತ
ಗುಣಧಾಮದಯಾನಿದೆ ॥೨॥

ನಾಗಭೂಷಣ ವಿಮಲ ಸದ್ರಾಗ ಪೋಷಣ
ಭೋಗಿಶಯನ ಜಗನ್ನಾಥ ವಿಠಲನ ಯೋಗದಿಭಜಿಸುವ
ಭಾಗವತರೊಳಿಡು ॥೩॥

ನಮಃ ಪಾರ್ವತಿ ಪತಿನುತ ಜನಪರ

ನಮಃ ಪಾರ್ವತಿ ಪತಿನುತ ಜನಪರ ನಮೋ ವಿರೂಪಾಕ್ಷ ।
ರಮಾರಮಣನಲಿ ಅಮಲ ಭಕುತಿ ಕೊಡೊ । ನಮೋ ವಿಶಾಲಾಕ್ಷ ।

ನೀಲಕಂಠ ತ್ರಿಶೂಲ ಡಮರು ಹಸ್ತಾಲಂಕೃತರಕ್ಷ ।
ಫಾಲನೇತ್ರ ಕಪಾಲರುಂಡ ಮಣಿ ಮಾಲಾಧೃತ ವಕ್ಷ ।
ಶೀಲರಮ್ಯ ವಿಶಾಲ ಸುಗುಣ ಸಲ್ಲೀಲ ಸುರಾಧ್ಯಕ್ಷ ।
ಶ್ರೀ ಲಕುಮೀಶನ ಓಲೈಸುವ ಭಕ್ತಾವಳಿಗಳ ಪಕ್ಷ ॥೧॥

ವಾಸವನುತ ಹರಿದಾಸ ಈಶ ಕೈಲಾಸವಾಸದೇವ ।
ದಾಶರಥಿಯ ಔಪಾಸಕ ಸುಜನರ ಪೋಷಿಪಪ್ರಭಾವ ।
ಭಾಸಿಸುತಿಹದು ಅಶೇಷ ಜೀವರಿಗೆ ಈಶನೆಂಬ ಭಾವ ।
ಶ್ರೀಶನಲ್ಲಿ ಕೀಲಿಸು ಮನವ ಗಿರಿಜೇಶ ಮಹಾದೇವ ॥೨॥

ಮೃತ್ಯುಂಜಯ ನಿನ್ನುತ್ತಮ ಪದಯುಗ ಭೃತ್ಯನೋ ಸರ್ವತ್ರ ।
ಹತ್ತಿರ ಕರೆದು ಅಪತ್ಯನಂತೆ ಪೊರೆಯುತ್ತಿರೋ ತ್ರಿನೇತ್ರ ।
ತೆತ್ತಿಗನಂತೆ ಕಾಯುತ್ತಿಹೆ ಬಾಣನ ಸತ್ಯದಿ ಸುಚರಿತ್ರ ।
ಕರ್ತೃ ಉಡುಪಿ ಸರ್ವೋತ್ತಮ ಶ್ರೀ ಕೃಷ್ಣನ ಪೌತ್ರ ಕೃಪಾಪಾತ್ರ ॥೩॥

ಧವಳಗಂಗೆಯ ಗಂಗಾಧರ

ಧವಳಗಂಗೆಯು ಗಂಗಾಧರ ಮಹಾಲಿಂಗ
ಮಾಧವನ ತೋರಿಸಯ್ಯ ಗುರು ಕುಲೋತ್ತುಂಗ ||ಪ||

ಅರ್ಚಿಸಿಪವರಿಗೆ ಭೀಷ್ಟವ ಕೊಡುವ
ಹೆಚ್ಚಿನ ಅಘಗಳ ತರಿದು ಬಿಸುಟುವಾ
ದುಶ್ಚರಿತಗಳೆಲ್ಲಾ ದೂರದಲ್ಲಿಡುವ
ನಮ್ಮಚ್ಯುತಗಲ್ಲದೆ ಅಸುರರಾ ಬಡಿವಾ ||೧||

ಮಾರನಗೆದ್ದ ಮನೋಹರಮೂರ್ತಿ
ಸಾಧು ಸಜ್ಜನರಿಗೆ ಸುರ ಚಕ್ರವರ್ತಿ
ಚನ್ನಪ್ರಸನ್ನ ಶ್ರೀ ಹಯವದನನ್ನ
ಅನುದಿನ ನೆನೆವಂತೆ ಮಾಡೊ ನೀಎನ್ನ
ಅನ್ಯನಲ್ಲವೊ ನಾನು ಗುರುವೆಂಬೆ ನಿನ್ನ
ಇನ್ನಾದರೂ ತೋರೊ ಧೀರ ಮುಕ್ಕಣ್ಣ ||೨||

ದಯಮಾಡೆ ದಯಮಾಡೆ

ದಯಮಾಡೆ ದಯಮಾಡೆ ತಾಯೇ ವಾಗ್ದೇವಿ
ದಯದಿಂದ ನೀ ಎನ್ನ ನೋಡೆ ವಾಗ್ದೇವಿ ||ಪ||

ಹಿತದಿ ಸನ್ಮತಿಯ ಶ್ರೀಮತಿ ದೇವಿ ನೀಡೆ
ವ್ರತತಿಜ ನೇತ್ರೇ ಭಾರತಿ ದಯಮಾಡೆ ||೧||

ಸುಮುಖೀತ್ವ ಚರಣಾಬ್ಜ ದ್ಯುಮ ಛಾಯಾ ಶ್ರಿತರ
ಸಮಿತಿಗಳೊಳಗಿಟ್ಟು ಮಮತೆಯಿಂಸಲಹೆ
ಜಗನ್ನಾಥ ವಿಠಲನಂಘ್ರಿಗಳ ಸೇವೆಯೊಳು
ಸುಗುಣೆ ಸನ್ಮತಿ ಕೊಟ್ಟು ಬೇಗೆನ್ನ ಸಲಹೆ ||೨||

ಭಾರತಿ ದೇವಿಯ ನೆನೆನೆನೆ

ಭಾರತಿ ದೇವಿಯ ನೆನೆನೆನೆ ।
ನಿರುತ ಭಕುತಿಗಿದು ಮನೆ ಮನೆ ॥
ಮಾರುತನರ್ಧಾಂಗಿ ಸುಚರಿತ ಕೋಮಲಾಂಗಿ ।
ಸಾರಸಾಂಗಿ ಕೃಪಾಂಗಿ ಅಪಾಂಗಿ ॥೧॥

ಕಿಂಕಿಣಿ ಕಿಣಿಪಾದ, ಪಂಕಜನೂಪುರ ।
ಕಂಕಣ ಕುಂಡಲ ಅಲಂಕೃತ ದೇಹ ॥
ಶಂಕರ ಸುರವರ ವಂದಿತ ಚರಣೆ
ಕಿಂಕರಿ ಪುರಂದರ ವಿಠಲನ ಕರುಣೆ ॥೨॥

ಶರಣೆಂಬೆವಾಣಿ ಪೊರೆಯ ಕಲ್ಯಾಣಿ

ಶರಣೆಂಬೆ ವಾಣಿ ಪೊರೆಯೆ ಕಲ್ಯಾಣಿ ॥ಪ॥

ವಾಗಭಿಮಾನಿ ವರಬ್ರಹ್ಮಾಣಿ
ಸುಂದರವೇಣಿ ಸುಚರಿತ್ರಾಣಿ ॥೧॥

ಜಗದೊಳು ನಿಮ್ಮ ಪೊಗಳುವೆ ನಮ್ಮ
ಹರಿಯ ತೋರಿಸೆಂದು ಪ್ರಾರ್ಥಿಪೆನಮ್ಮ ॥೨॥

ಹಾಡುವೆ ಶ್ರುತಿಯ ಬೇಡುವೆ ಮತಿಯ
ಪುರಂದರ ವಿಠಲನ

ಅಂಜಿಕಿನ್ಯಾತಕಯ್ಯಾ

ಅಂಜಿಕಿನ್ಯಾತಕಯ್ಯಾ ಸಜ್ಜನರಿಗೆ ಭಯವು ಇನ್ಯಾತಕಯ್ಯಾ
ಸಂಜೀವರಾಯರ ಸ್ಮರಣೆ ಮಾಡಿದ ಮೇಲೆ ॥ ಪ ॥

ಕನಸಲಿ ಮನಸಲಿ ಕಳವಳವಾದರೆ
ಹನುಮನ ನೆನೆದರೆ ಹಾರಿ ಹೋಗದೆ ಪಾಪ ॥೧॥

ರೋಮ ರೋಮಕೆ ಕೋಟಿ ಲಿಂಗವುದರಿಸಿದ
ಭೀಮನ ನೆನೆದರೆ ಬಿಟ್ಟು ಹೋಗದೆ ಭೀತಿ ॥೨॥

ಪುರಂದರ ವಿಠಲನ ಪೂಜೆಯೆ ಮಾಡುವ
ಗುರುಮಧ್ವರಾಯರ ಸ್ಮರಣೆ ಮಾಡಿದ ಮೇಲೆ ॥೩॥

ಕೂಸಿನ ಕಂಡೀರ

ಕೂಸಿನ ಕಂಡೀರ ಗುರುಮುಖ್ಯಪ್ರಾಣನ ಕಂಡೀರ ।
ಬಾಲನ ಕಂಡೀರ ಬಲವಂತನ ಕಂಡೀರ ॥

ಅಂಜನಿ ಉದರದಿ ಪುಟ್ಟಿತು ಕೂಸು । ರಾಮನಚರಣಕೆಎರಗಿತು ಕೂಸು॥
ಸೀತೆಗೆ ಉಂಗುರ ಕೊಟ್ಟಿತು ಕೂಸು । ಲಂಕಾಪುರವನೆ ಸುಟ್ಟಿತು ಕೂಸು ॥೧॥

ಬಂಡಿ ಅನ್ನವ ಉಂಡಿತು ಕೂಸು । ಬಕನ ಪ್ರಾಣವ ಕೊಂದಿತು ಕೂಸು॥
ವಿಷದ ಲಡ್ಡುಗೆ ಮೆದ್ದಿತು ಕೂಸು । ಮಡದಿಗೆ ಪುಷ್ಪವ ಕೊಟ್ಟಿತು ಕೂಸು ॥೨॥

ಮಾಯವಾದಿಗಳ ಗೆದ್ದಿತು ಕೂಸು । ದ್ವೈತ ಮತವನುದ್ಧರಿಸಿತು ಕೂಸು॥
ಮಧ್ವರಾಯರೆಂಬೋ ಪೆಸರಿನ ಕೂಸು। ಪುರಂದರವಿಠಲನ ಪ್ರೇಮದ ಕೂಸು ॥೩॥

ನಂಬಿದೆ ನಿನ್ನ ಪಾದ

ನಂಬಿದೆ ನಿನ್ನ ಪಾದ । ಗುರುಮುಖ್ಯ ಪ್ರಾಣ । ನಂಬಿದೆ ನಿನ್ನ ಪಾದ ॥
ನಂಬಿದೆ ನಿನ್ನ ಪಾದ ಡಂಭವ ತೊಲಗಿಸಿ ॥
ಡಿಂಭದೊಳಗೆ ಹರಿಯ ಬಿಂಬ ಪೊಳೆವಂತೆ ಮಾಡೊ ॥
ಇಪ್ಪತ್ತುಒಂದು ಸಾವಿರ ಐದೊಂದುನೂರು ಅಪ್ರತಿಮಹಂಸಮಂತ್ರ ॥
ತಪ್ಪದೆ ದಿನದಿನ ವಪ್ಪವಂದದಿ ಜಪಿಸಿ ॥
ತಪ್ಪಿಸೋ ಭವದ ಸಮಿಪ್ಪದಿ ಜೀವರಿಗೆ ॥
ಅಪ್ಪನಂದದಿ ಪುಣ್ಯ ಬಪ್ಪಂತೆ ಕರುಣಿಸೋ ॥
ಕಪ್ಪುವರ್ಣನ ಕೂಡ ಒಪ್ಪಿಸಿ ಪಾಲಿಸೋ ॥ ೧ ॥

ಹತ್ತೇಳು ಎರಡಾಯುತ, ನಾಡಿಯೊಳು ಸುತ್ತಿಸುತ್ತುವ ಮಾರುತ ॥
ಉತ್ತರಲಾಲಿಸೋ ಉತ್ಕ್ರಮಣದಲ್ಲಿ ॥
ನೆತ್ತಿಯದ್ವಾರದಿಂದ ಎತ್ತ ಪೋಗಲೀಸದೆ ॥
ತತ್ತುವರೊಳು ಜೀವೋತ್ತುಮನೆ ಸತ್ ॥
ಚಿತ್ತ ಎನಗೆ ಕೊಡುತುತ್ತರ ಲಾಲಿಸೋ ॥ ೨ ॥

ಅಂತರಂಗದ ಉಸಿರ, ಹೊರಗೆ ಬಿಟ್ಟು ಅಂತರಂಗಕ್ಕೆ ಸೇರುವ ॥
ಪಂಥದಾಳು ನೀನೆ ಕಂತು ಜನಕನಲ್ಲಿ ॥
ಮಂತ್ರಿಯೆನಿಸಿ ಸರ್ವಾಂತರ್ಯಾಮಿಯಾಗಿ ॥
ನಿಂತು ನಾನಾಬಗೆ ತಂತು ನಡೆಸುವ ಹೊಂತಕಾರಿ ಗುಣವಂತ ಬಲಾಢ್ಯ॥
ಪಂಚಪ್ರಾಣರೂಪನೆ, ಸತ್ವಕಾಯಾ ಪಂಚೇಂದ್ರಿಯಗಳಪ್ಪನೆ ॥

ಮುಂಚಿನ ಪರಮೇಷ್ಠಿ ಸಂಚಿತ ಗಾಮ ಬಿಡಿಸಿ ॥
ಕೊಂಚ ಮಾಡೋಪ್ರಾರಬ್ಧ ॥
ವಂಚನೆಗೈಸದೆ ಅಂಚಂಚಿಗೆ ಪರಂಪಂಚಗಳೋಡಿಸಿ ॥
ಪಂಚವಕ್ತ್ರ ಹರಿಮಂಚದ ಗುರುವೇ ॥೪॥

ಯೋಗಾಸನದೊಳಿಪ್ಪ, ಯಂತ್ರೋದ್ಧಾರಾ ಭಾಗವತರಪ್ಪ ॥
ಯೋಗಿಗಳಿಗೀಶ ವ್ಯಾಸಗೊಲಿದ ನ್ಯಾಸ ॥
ಶ್ರೀ ತುಂಗಭದ್ರ ನಿವಾಸ । ಭಾಗುವೆ ಕೊಡ ಲೇಸ ॥
ಶ್ರೀ ಗುರುವಿಜಯವಿಠಲನ ಪಾದಕೆ ಬಾಗಿದ ಭವದೂರ ಜಾಗರ ಮೂರುತಿ॥

ಪವಮಾನ ಜಗದ ಪ್ರಾಣ

ಪವಮಾನ ಜಗದ ಪ್ರಾಣ
ಸಂಕರುಷಣ ಭವ ಭವಭಯಾರಣ್ಯ ದಹನಾ ॥ ಪವನ ॥

ಶ್ರವಣವೆ ಮೊದಲಾದ ನವವಿಧ ಭಕುತಿಯ ।
ತವಕದಿಂದಲಿ ಕೊಡು ಕವಿಜನ ಪ್ರೀಯಾ ॥

ಹೇಮ – ಕಚ್ಚುಟ ಉಪವೀತ ಧರಿಪ ಮಾರುತ ।
ಕಾಮಾದಿ ವರ್ಗ ರಹಿತ ॥
ವ್ಯೋಮಾದಿ ಸರ್ವ ವ್ಯಾಪುತ, ಸತತ ನಿರ್ಭೀತ ।
ರಾಮಚಂದ್ರನ ನಿಜದೂತ ॥
ಯಾಮ ಯಾಮಕೆ ನಿನ್ನಾರಾಧಿಪುದಕೆ ।
ಕಾಣಿಪೆ ಎನಗಿದ ನೇಮಿಸಿ ಪ್ರತಿ ದಿನ ॥
ಈ ಮನಸಿಗೆ ಸುಖಸ್ತೋಮವತೋರುತ ।
ಪಾಮರಮತಿಯನು ನೀಮಾಣಿಪುದು ॥

ವಜ್ರ ಶರೀರ ಗಂಭೀರ। ಮುಕುಟಧರ । ದುರ್ಜನವನಕುಠಾರ ॥
ನಿರ್ಜರ ಮಣಿ ದಯಾ ಪಾರವಾರ ಉದಾರ । ಸಜ್ಜನರಘಪರಿಹಾರ ॥
ಅರ್ಜುನಗೊಲಿದಂದು ಧ್ವಜವಾನಿಸಿ ನಿಂದು ।
ಮಾರ್ಜಗವರಿವಂತೆ ಗರ್ಜನೆ ಮಾಡಿದೆ ॥
ಹೆಜ್ಜೆ ಹೆಜ್ಜೆಗೆ ನಿನ್ನ ಅಬ್ಜಪಾದದ ಧೂಳಿ
ಮಾರ್ಜಗದಲಿ ಭವವರ್ಜಿತನೆನಿಸೊ ॥

ಪ್ರಾಣ ಅಪಾನ ವ್ಯಾನ ಉದಾನ ಸಮಾನ ಆನಂದ ಭಾರತಿ ರಮಣ ।
ನೀನೆ ಶರ್ವಾದಿ ಗೀರ್ವಾಣಾದ್ಯಮರಿಗೆ ಜ್ಞಾನ ಧನ ಪಾಲಿಪವರೇಣ್ಯ ॥
ನಾನು ನಿರುತದಲಿ ಏನೇನೆಸಗಿದೆ ।
ಮಾನಸಾದಿ ಕರ್ಮ ನಿನಗೊಪ್ಪಿಸಿದೆನೊ ॥
ಪ್ರಾಣನಾಥ ಸಿರಿ ವಿಜಯ ವಿಠಲನ ।
ಕಾಣಿಸಿಕೊಡುವುದು ಭಾನು ಪ್ರಕಾಶ ॥

ಏನು ಧನ್ಯಳೋ

ಏನು ಧನ್ಯಳೋ ಲಕುಮಿ ಎಂಥ ಮಾನ್ಯಳೋ
ಸಾನುರಾಗದಿಂದ ಹರಿಯ ತಾನೆ ಸೇವೆ ಮಾಡುತಿಹಳು ॥ಪ॥

ಕೋಟಿ ಕೋಟಿ ಭೃತ್ಯರಿರಲು ಹಾಟಕಾಂಬರನ ಸೇವೆ
ಸಾಟಿಯಿಲ್ಲದೆ ಮಾಡಿ ಪೂರ್ಣ ನೋಟದಿಂದ ಸುಖಿಸುತಿಹಳು ॥೧॥

ಛತ್ರ ಚಾಮರ ವ್ಯಜನ ಪರಿಯಂಕ ಪಾತ್ರರೂಪದಲ್ಲಿ ನಿಂತು
ಚಿತ್ರ ಚರಿತನಾದ ಹರಿಯ ನಿತ್ಯ ಸೇವೆ ಮಾಡುತಿಹಳು ॥೨॥

ಸರ್ವಸ್ಥಳದಿ ವ್ಯಾಪ್ತನಾದ ಸರ್ವ ದೋಷರಹಿತನಾದ
ಗರುಢಗಮನ ಪುರಂಧರ ವಿಠಲನ್ನ ಸೇವಿಸುವಳು ॥೩॥

ಪಾಲಿಸೆ ಪದುಮಾಲಯೆ

ಪಾಲಿಸೆ ಪದುಮಾಲಯೆ ನೀನೇ ಗತಿ
ಪಾಲಿಸೇ ಪದುಮಾಲಯೆ ॥ಪ॥

ಬಾಲಕನು ತಾನಾಗಿ ಗೋಪಿಗೆ ಲೀಲೆಯಿಂದಲಿ ನಂದಗೋಕುಲ
ಬಾಲೆಯರ ಮೋಹಿಸುತ ಅಸುರರ ಕಾಲನೆನಿಸಿದ ಬಾಲಕನಪ್ರಿಯೆ ॥೧॥

ಅನ್ಯರ ನೆನೆಯಲೊಲ್ಲೆ ನಿನ್ನಯ ಪಾದವನ್ನು ನಂಬಿದೆ ನೀಬಲ್ಲೆ
ತಡವಮಾಡದೆ ಚಿಣ್ಣ ಕರೆಯಲು ತನ್ನ ಭಕ್ತರ ಉನ್ನತದ ರೂಪಿನಲಿ
ಗುಣ ಸಂಪನ್ನ ರಕ್ಕಸರನ್ನು ಸೀಳಿದ ಪನ್ನಗಾದ್ರಿ ನಿವಾಸ ಹರಿಪ್ರಿಯೆ ॥೨॥

ಅಜಮನಸಿಜ ಜನನೀ ಅಂಬುಜಪಾಣಿ ತ್ರಿಜಗ ಸನ್ನಿಭ ವೇಣಿ
ನಿತ್ಯ ಕಲ್ಯಾಣಿ
ಕುಜನ ಮರ್ಧನ ವಿಜಯ ವಿಠಲನ ಭಜಿಸಿ ಪಾಡುವ ಭಕ್ತ ಕೂಟವ
ನಿಜದಿ ಸಲಹುವೆನೆಂಬ ಬಿರುದುಳ್ಳ ವಿಜಯ ಸಾರಥಿ ವಿಶ್ವಂಭರಪ್ರಿಯೆ

ಭಾಗ್ಯದ ಲಕ್ಷ್ಮೀ ಬಾರಮ್ಮ

ಭಾಗ್ಯದ ಲಕ್ಷ್ಮೀ ಬಾರಮ್ಮ ನಮ್ಮಮ್ಮ ನೀ
ಸೌಭಾಗ್ಯದ ಲಕ್ಷ್ಮೀ ಭಾರಮ್ಮ
ಹೆಜ್ಜೆಯ ಮೇಲೊಂದ್ಹೆಜ್ಜೆಯ ನಿಕ್ಕುತ ।
ಗೆಜ್ಜೆಯ ಕಾಲ್ಗಳ ಧ್ವನಿಯ ಬೀರುತ ।
ಸಜ್ಜನಸಾಧು ಪೂಜೆಯ ವೇಳೆಗೆ ।
ಮಜ್ಜಿಗೆಯೊಳಗಿನ ಬೆಣ್ಣೆಯಂತೆ ॥

ಕನಕವೃಷ್ಟಿಯ ಕರೆಯುತ ಬಾರೇ । ಮನಕಾಮನದ ಸಿದ್ಧಿಯ ತೋರೆ ।
ದಿನಕರ ಕೋಟಿ ತೇಜದಿ ಹೊಳೆಯುವ । ಜನಕರಾಯನ ಕುಮಾರಿ ಬೇಗ॥

ಅತ್ತಿತ್ತಗಲದೆ ಭಕ್ತರ ಮನೆಯೊಳು । ನಿತ್ಯ ಮಹೋತ್ಸವ ನಿತ್ಯ ಸುಮಂಗಳ ।
ಸತ್ಯದಿ ತೋರುತ ಸಾಧು ಸಜ್ಜನರಿಗೆ। ಚಿತ್ತದಿ ಹೊಳೆಯುವ ಪುತ್ಥಳಿ ಬೊಂಬೆ॥

ಶಂಕೆಯಿಲ್ಲದ ಭಾಗ್ಯವ ಕೊಟ್ಟು । ಕಂಕಣಕೈಯ ತಿರುವುತ ಬಾರೆ ।
ಕುಂಕುಮಾಂತಿತೆ ಪಂಚಜಲೋಚನೆ । ವೆಂಕಟರಮಣನ ಬಿಂಕದರಾಣಿ ॥

ಸಕ್ಕರೆ ತುಪ್ಪದ ಕಾಲುವೆ ಹರಿಸಿ । ಶುಕ್ರವಾರದ ಪೂಜೆಯ ವೇಳೆಗೆ
ಅಕ್ಕರೆಯುಳ್ಳ ಅಳಗಿರಿರಂಗನ । ಚೊಕ್ಕ ಪುರಂದರವಿಠಲನ ರಾಣಿ ॥

ಬಾರೋ ವೆಂಕಟರಮಣ

ಬಾರೋ ವೆಂಕಟರಮಣ । ಭಕ್ತರ ನಿಧಿಯೆ । ಪ ।
ತೋರೋ ನಿನ್ನ ದಯ । ತೋಯಜಾಂಭಕನೆ । ಅ ।

ವೇದ ಗೋಚರ ಬಾರೋ । ಆದಿ ಕಚ್ಛಪ ಬಾರೋ ।
ಮೋದಸುತನೆ ಬಾರೋ । ಸದಯಾನ ಶೋಭನ ಬಾರೋ ॥ ೧ ॥

ವಾಮನ ಭಾಗರ್ವ ಬಾರೋ । ರಾಮ ಕೃಷ್ಣನೆ ಬಾರೋ ।
ಪ್ರೇಮದ ಬುದ್ಧನೆ ಬಾರೋ । ಸ್ವಾಮಿ ಕಲ್ಕಿನಿ ಬಾರೋ ॥ ೨ ॥

ಅರವಿಂದನಾಭ ಬಾರೋ । ಸುರರ ಪ್ರಭುವೆ ಬಾರೋ ।
ಪುರಹುತ ವಂದ್ಯ ಬಾರೋ । ಪುರಂದರ ವಿಠ್ಠಲ ಬಾರೋ ॥ ೩ ॥

ದೇವ ಬಂದಾ ನಮ್ಮ ಸ್ವಾಮಿ

ದೇವ ಬಂದಾ ನಮ್ಮ ಸ್ವಾಮಿ ಬಂದಾನೋ
ದೇವರ ದೇವ ಶಿಖಾ ಮಣಿ ಬಂದ ॥ಪ॥

ಉರಗ ಶಯನ ಬಂದ ಗರುಡ ಗಮನ ಬಂದ
ನರಗೊಲಿದವ ಬಂದ ನಾರಾಯಣ ಬಂದ ॥೧॥

ನಕ್ರಹರನು ಬಂದ ಚಕ್ರಧರನು ಬಂದ
ಅಕ್ರೂರಗೊಲಿದ ತ್ರಿವಿಕ್ರಮ ಬಂದನೊ ॥೨॥

ಮಂದರೋದ್ಧಾರ ಬಂದ ಮಾಮನೋಹರ ಬಂದ
ಬೃಂದಾವನ ಪತಿ ಗೋವಿಂದ ಬಂದಾನೊ ॥೩॥

ನಿಗಮಗೋಚರ ಬಂದ ನಿತ್ಯ ತೃಪ್ತನು ಬಂದ
ನಗೆಮುಖ ಪುರಂಧರ ವಿಠ್ಠಲ ಬಂದಾನೊ ॥೪॥

ಬಂದ ಕೃಷ್ಣ ಚೆಂದದಿಂದ

ಬಂದ ಕೃಷ್ಣ ಚೆಂದದಿಂದ ಬಂದ ನೋಡಿ ।
ಗೋಪ ವೃಂದದಿಂದಾನಂದಿಸುತಾ ಬಂದ ನೋಡೆ ॥

ಗೋವ ಮೇವ ನೀವದೇವ ಬಂದ ನೋಡಿ ।
ಸ್ವಾಮಿ ದೇವತಾ ವಾದ್ಯಗಳಿಂದ ಬಂದ ನೋಡೆ ॥
(ಗೋಪ ...... ನೋಡಿ)

ಪಾಪ ಪೋಪ ಗೋಪ ರೂಪ ಬಂದ ನೋಡೆ ।
ಸ್ವಾಮಿ ತಾಪ ಲೋಪಾಲಾಪ ಟೋಪಾ ಬಂದ ನೋಡೆ ॥
(ಗೋಪ ...... ನೋಡಿ)

ಭೂಸುರ ಸುಖ ಸೂಸುತ ತಾ ಬಂದ ನೋಡೆ ।
ಸ್ವಾಮಿ ವಾಸುದೇವ ವಿಠಲ ಬಂದ ನೋಡೆ ॥
(ಗೋಪ ...... ನೋಡಿ)

ಹರಿ ಸಂಕೀರ್ತನೆ

ಹರಿ ನಾರಾಯಣ ಹರಿ ನಾರಾಯಣ । ಹರಿ ನಾರಾಯಣ ಎನು ಮನವೆ । ಪ ।

ನಾರಾಯಣನೆಂಬೊ ನಾಮದ ಬೀಜವ । ನಾರದ ಬಿತ್ತಿದ ಧರೆಯೊಳಗೆ । ಅ ।

ತರಳ ಧೃವನಿಂದ ಅಂಕುರಿಸಿತು ಅದು । ವರ ಪ್ರಲ್ಹಾದನಿಂದ ಮೊಳಕೆಯಾಯ್ತು
ಧರಣಿಶ ರುಕುಮಾಂಗದನಿಂದ ಚಿಗುರಿತು । ಕುರುಪಿತ ಮಹನಿಂದ ಹೂವಾಯ್ತು । ೧ ।

ವಿಜಯನ ಸತಿಯಿಂದ ಫಲವಾಯಿತು ಅದು । ಗಜರಾಜನಿಂದ ಡೊರೆ ಹಣ್ಣಾಯ್ತು
ದ್ವಿಜ ಶುಖಮುನಿಯಿಂದ ಫಲ ಪಕ್ವವಾಯಿತು । ಅಜಮಿಳ ತಾನುಂಡು ರಸ ಸವಿದಾ । ೨ ।

ಕಾಮಿತ ಫಲವೀವ ನಾಮ ಒಂದಿರಲಿಕ್ಕೆ । ಹೋಮ ನೇಮ ಜಪ ತಪವೇಕೇ
ಸ್ವಾಮಿ ಶ್ರೀಪುರಂದರ ವಿಠ್ಠಲನ ನಾಮವ । ನೇಮದಿಂದಾ ನೀ ನೆನೆಮನವೇ । ೩ ।

ಕೇಶವ ನಾಮ

ಈಶ ನಿನ್ನ ಚರಣ ಭಜನೆ ಆಸೆಯಿಂದ ಮಾಡುವೆನು । ದೋಷರಾಶಿ ನಾಶಮಾಡು ಶ್ರೀಶ ಕೇಶವ । ೧ ।

ಶರಣು ಹೊಕ್ಕೆನಯ್ಯ ಎನ್ನ ಮರಣ ಸಮಯದಲ್ಲಿ ನಿನ್ನ । ಚರಣಸ್ಮರಣೆ ಕರುಣಿಸಯ್ಯ ನಾರಾಯಣ । ೨ ।

ಶೋಧಿಸೆನ್ನ ಭವದ ಕಲುಷ ಬೋಧಿಸಯ್ಯ ಜ್ಞಾನವೆನಗೆ । ಬಾಧಿಸುವ ಯಮನ ಬಾಧೆ ಬಿಡಿಸೋ ಮಾಧವ । ೩ ।

ಹಿಂದನೇಕಯೋನಿಯಲ್ಲಿ ಬಂದು ಬಂದು ನೊಂದೆನಾನು । ಇಂದು ಭವದ ಬಂಧ ಬಿಡಿಸೋ ತಂದೆ ಗೋವಿಂದ । ೪ ।

ಭ್ರಷ್ಟನೆನಿಸಬೇಡ ಕೃಷ್ಣ ಇಷ್ಟು ಮಾತ್ರ ಬೇಡಿಕೊಂಬೆ । ಶಿಷ್ಟರೊಡನೆ ಇಟ್ಟು ಕಷ್ಟ ಬಿಡಿಸೊ ವಿಷ್ಣುವೇ । ೫ ।

ಮದನನಯ್ಯ ನಿನ್ನ ಮಹಿಮೆ ವದನದಲ್ಲಿ ನುಡಿಯುವಂತೆ । ಹೃದಯದಲ್ಲಿ ಹುದುಗಿಸಯ್ಯ ಮಧುಸೂದನ । ೬ ।

ಕವಿದುಕೊಂಡು ಇರುವ ಪಾಪ ಸವೆದು ಹೋಗುವಂತೆ ಮಾಡಿ । ಜವನ ಬಾಧೆಯನ್ನು ಬಿಡಿಸೋ ತ್ರಿವಿಕ್ರಮ । ೭ ।

ಕಾಮಜನಕ ನಿನ್ನ ನಾಮ ಪ್ರೇಮದಿಂದ ಪಾಡುವಂಥ । ನೇಮವೆನಗೆ ಪಾಲಿಸಯ್ಯ ಸ್ವಾಮಿ ವಾಮನ । ೮ ।

ಮೊದಲು ನಿನ್ನ ಪಾದಪೂಜೆ ಒದಗುವಂತೆ ಮಾಡೋ ಎನ್ನ । ಹೃದಯದೊಳಗೆ ಸದನ ಮಾಡು ಮುದದಿ ಶ್ರೀಧರ।೯।

ಹುಸಿಯನಾಡಿ ಹೊಟ್ಟೆ ಹೊರೆವ ವಿಷಯದಲ್ಲಿ ರಸಿಕನೆಂದು । ಹುಸಿಗೆ ಹಾಕದಿರೊ ಎನ್ನ ಹೃಷಿಕೇಶನೆ । ೧೦ ।

ಕಾಮಕ್ರೋಧ ಬಿಡಿಸಿ ನಿನ್ನ ನಾಮ ಜಿಹ್ವೆಯೊಳಗೆ ನುಡಿಸೋ । ಶ್ರೀಮಹಾನುಭಾವನಾದ ದಾಮೋದರ । ೧೧ ।

ಬಿದ್ದು ಭವದನೇಕ ಜನುಮ ಬದ್ಧನಾಗಿ ಕಲುಷದಿಂದ । ಗೆದ್ದುಪೋಪ ಬುದ್ಧಿ ತೋರೋ ಪದ್ಮನಾಭನೇ । ೧೨ ।

ಪಂಕಜಾಕ್ಷ ನೀನು ಎನ್ನ ಮಂಕು ಬುದ್ಧಿಯನ್ನು ಬಿಡಿಸಿ । ಕಿಂಕರನ್ನ ಮಾಡಿಕೊಳ್ಳೊ ಸಂಕರ್ಷಣ । ೧೩ ।

ಏ ಜನ್ಮ ಬಂದರೇನು ದಾಸನಲ್ಲವೇನು ನಾನು । ಘಾಸಿ ಮಾಡದಿರು ಇನ್ನು ವಾಸುದೇವನೆ । ೧೪ ।

ೂನ್ಯನಾಗಿ ಎನ್ನ ಬದ್ಧಕಾಯ ಕುಹಕ ಮನವ । ತಿದ್ದಿ ಹೃದಯ ಶುದ್ಧ ಮಾಡೋ ಪ್ರದ್ಯುಮ್ನನೆ । ೧೫ ।

ಕ ನೀನೆಯೆಂದು ನೆನೆವೆನಯ್ಯ ದೀನಬಂಧು । ಎನಗೆ ಮುಕ್ತಿ ಪಾಲಿಸಿಂದು ಅನಿರುದ್ಧನೆ । ೧೬ ।

ನಿನ್ನ ನಾಮ ಸ್ಮರಿಸುವಂತೆ ಮಾಡು ಕ್ಷೇಮ । ಇರಿಸು ಚರಣದಲ್ಲಿ ಪ್ರೇಮ ಪುರುಷೋತ್ತಮ । ೧೭ ।

ಟ್ಟು ನೀನು ಪಾದ ಭಜನೆ ಇತ್ತು ನಿನ್ನ । ಭೇದ ಮಾಡದಿರೋ ಎನ್ನ ಅಧೋಕ್ಷಜ । ೧೮ ।

ಚಾರು ಚರಣ ತೋರಿ ಎನಗೆ ಪಾರುಗಾಣಿಸಯ್ಯ ಕೊನೆಗೆ । ಭಾರ ಹಾಕಿರುವೆ ನಿನಗೆ ನಾರಸಿಂಹನೇ । ೧೯ ।

ಸಂಚಿತಾರ್ಥ ಪಾಪಗಳನು ಕಿಂಚಿತಾದ ಪೀಡೆಗಳನು । ಮುಂಚಿತಾಗಿ ಕಳೆಯಬೇಕೋ ಸ್ವಾಮಿ ಅಚ್ಯುತ । ೨೦ ।

ಜ್ಞಾನ ಭಕುತಿ ಕೊಟ್ಟು ನಿನ್ನ ಧ್ಯಾನದಲ್ಲಿ ಇಟ್ಟು ಎನ್ನ । ಹೀನ ಬುದ್ಧಿ ಬಿಡಿಸೋ ಮುನ್ನ ಶ್ರೀಜನಾರ್ಧನ । ೨೧ ।

ಜಪತಪಾನುಷ್ಠಾನವಿಲ್ಲಾ ಕುಪಿತಗಾಮಿಯಾದ ಎನ್ನ । ಕೃಪೆಯ ಮಾಡಿ ಕ್ಷಮಿಸಬೇಕು ಉಪೇಂದ್ರನೆ । ೨೨ ।

ಮೊರೆಯ ಇಡುವೆನಯ್ಯ ನಿನಗೆ ಶರಧಿಶಯನ ಶುಭಮತಿಯ । ಇರಿಸೋ ಭಕ್ತರೊಳು ಪರಮಪುರುಷ ಶ್ರೀಹರೇ।೨೩।

ಪುಟ್ಟಿಸಲೇ ಬೇಡವಿನ್ನು ಪುಟ್ಟಿಸಿದಕೆ ಪಾಲಿಸಿನ್ನು । ಇಷ್ಟು ಮಾತ್ರ ಬೇಡಿಕೊಂಬೆ ಶ್ರೀಕೃಷ್ಣನೇ । ೨೪ ।

ಸತ್ಯವಾದ ನಾಮಗಳನು ನಿತ್ಯದಲ್ಲಿ ಪಠಿಸುವರಿಗೆ । ಅರ್ತಿಯಿಂದ ಸಲಹುತಿರುವ ಕರ್ತೃ ಕೇಶವ । ೨೫ ।

ಮರೆಯದಲೆ ಹರಿಯ ನಾಮ ಬರಿದು ಓದಿ ಪೇಳುವರಿಗೆ । ಕರೆದು ಮುಕ್ತಿ ಕೊಡುವ ನೆಲೆಯಾದಿ ಕೇಶವ । ೨೬ ।

ತೂಗಿರೆ ರಾಯರ

ತೂಗಿರೆ ರಾಯರ ತೂಗಿರೆ ಗುರುಗಳ
ತೂಗಿರೆ ಯತಿಕುಲ ತಿಲಕರ ॥ಪ॥
ತೂಗಿರೆ ಯೋಗೀಂದ್ರ ಕರಕಮಲ ಪೂಜ್ಯರ
ತೂಗಿರೆ ಗುರು ರಾಘವೇಂದ್ರ ರ ॥ಅಪ॥

ಕುಂದನ ಮಯವಾದ ಚಂದದ ತೊಟ್ಟಿಲೊಳ್
ಆನಂದದಿ ಮಲಗ್ಯಾರ ತೂಗಿರೆ
ನಂದನ ಕಂದ ಗೋವಿಂದ ಮುಕುಂದನ
ಚಂದದಿ ಭಜಿಪರ ತೋಗಿರೆ ॥೧॥

ಯೋಗ ನಿದ್ರೆಯಾನ ಬೇಗನೆ ಮಾಡುವ
ಯೋಗಿಶ್ಯವಂದ್ಯರ ತೂಗಿರೆ
ಭೋಗಿಶಯನನ ಪಾದ
ಮೋದದಿ ಭಜಿಪರ ಭಾಗವತರನ್ನ ತೂಗಿರೆ ॥೨॥

ಭಜಕ ಜನರು ತಮ್ಮ ಭಜನೆಯ ಮಾಡಲು
ನಿಜ ಗತಿ ಇಬ್ಬರ ತೂಗಿರೆ
ನಿಜ ಗುರು ಜಗನಾಥ ವಿಠಲನ ಪಾದವ
ಭಜನೆಯ ಮಲ್ಪರಣ ತೂಗಿರೆ ॥೩॥

ಮನ್ನಾರು ಕೃಷ್ಣಗೆ

ಮನ್ನಾರು ಕೃಷ್ಣಗೆ ಮಂಗಳ । ಜಗವ ಮನ್ನಿಸಿದೊಡೆಯಂಗೆ ಮಂಗಳ ॥
ದೇವಕಿ ದೇವಿಯ ತನಯಗೆ ಮಂಗಳ । ದೇವ ತಿಮ್ಮಪ್ಪಗೆ ಮಂಗಳ ॥
ಮಾವನಕೊಂದು ಮಲ್ಲರ ಮಡುಹಿದ ಪುರಂದರ ವಿಠಲಗೆ ಮಂಗಳ

ಶ್ರೀಪತಿಯು ನಮಗೆ

ಶ್ರೀ ಪತಿಯು ನಮಗೆ ಸಂಪದವೀಯಲಿ ।
ವಾಣಿ ಪತಿಯು ನಮಗೆ ದೀರ್ಘಯು ಕೊಡಲಿ

ವರ ವಿಬುಧರನು ಪೊರೆಯ । ವಿಷವ ಕಂಠದಲಿಟ್ಟ ।
ಹರಿನಿತ್ಯ ನಮಗೆ ಸಹಾಯ ಮಾಡಲಿ ॥

ನರರೊಳುನ್ನತವಾದ । ನಿತ್ಯ ಭೋಗಂಗಗಳನು ಪುರು ಹೂತ
ಪೂರ್ಣಮಾಡಿಸಲಿ ನಮಗೆ ॥

ವಿನುತ ಸಿದ್ಧಿ ಪ್ರದ ವಿಘ್ನೇಶನ ದಯದಿಂದ
ನೆನೆದ ಕಾರ್ಯಗಳೆಲ್ಲ ನೆರವೇರಲಿ ॥
ದಿನ ದಿನದಿ ಧನ್ವಂತ್ರಿ ಆಪತ್ತುಗಳ ಕಳೆದು ಮನ
ಹರುಷ ವಿತ್ತು ಮನ್ನಿಸಲಿ ಬಿಡದೆ ॥

ನಿರುತ ಸುಜ್ಞಾನವನು ಈವ ಗುರು ಮಧ್ವರಾಯ।
ಗುರುಗಳಾಶೀರ್ವಾದ ನಮಗಾಗಲಿ ।
ಪುರಂದರ ವಿಠಲನ ಕರುಣೆಯಿಂದಲಿ ನಿತ್ಯ
ಸುರರೊಲುಮೆ ನಮಗೆ ಸುಸ್ಥಿರವಾಗಲಿ ॥

***

ಪುರಂದರ ದಾಸರದಯವೊಂದಿದ್ದರೆ

ದಾಸರದಯವೊಂದಿದ್ದರೆ ಮನುಜಗೆ ವಾಸುದೇವನು ದಯಮಾಡುವನು
ದಾಸದೀಕ್ಷೆಯ ಸಂದೇಶವಿತ್ತ ಕಮಲೇಶಪ್ರಿಯ ದಾಸಶ್ರೇಷ್ಠ ಪುರಂದರ

ಪುರಂದರದಾಸರೇ ದಾಸರೆಂದೆನುತಲಿ ಗುರುವ್ಯಾಸರಾಜರು ಸಾರಿದರು
ಹರಿಯ ಅಣತಿಯಿಂದ ನರರನ್ನುದ್ಧರಿಸಲು
ಧರೆಗೆ ಇಳಿದುಬಂದ ಸುರಮುನಿಗಳು ಇಂತ । ೧ ।

ಭಕ್ತವರದಪಾದಾಸಕ್ತದಾಸರ ಕೂಟ ಮಸ್ತಕಮುಕುಟ ವಿರಕ್ತಗುರು
ಚಿತ್ತಜಪಿತನ ವಿಚಿತ್ರಲೀಲೆಗಳನು
ನಿತ್ಯನೋಡುವ ಪೂತಾತ್ಮ ಪುರಂದರ । ೨ ।

ಕಂತುಜನಕ **ರಮಾಕಾಂತ ವಿಠಲ**ನೇ ಕಾಂತದಿ ಭಜಿಸಿ ಹೃದ್ಭ್ರಾಂತಿಯನು
ಅಂತ್ಯಗೊಳಿಪ ಮುಕ್ತಿಪಂತವ ತೋರೀ
ಸಂತರ ಪೊರೆದ ಧೀಮಂತ ಪುರಂದರ । ೩ ।

ಗುರು ಪುರಂದರ ದಾಸರೆ

ಗುರು ಪುರಂದರ ದಾಸರೆ ನಿಮ್ಮ ಚರಣ ಕಮಲವ ನಂಬಿದೆ ॥ ಪ ॥
ಗರ್ವ ರಹಿತನ ಮಾಡಿ ಎನ್ನನು ಪೊರೆವ ಭಾರವು ನಿಮ್ಮದೇ ॥ ಅ ಪ ॥

ಒಂದು ಅರಿಯದ ಮಂದಮತಿ ನಾನಿಂದು ನಿಮ್ಮನು ನಂಬಿದೆ ।
ಇಂದಿರೇಶನ ಪಾದ ತೋರಿಸಿ ತಂದೆ ಮಾಡೆಲೊ ಸತ್ಕೃಪೆ ॥ ೧ ॥

ಮಾರಜನಕನ ಸನ್ನಿಧಾನದಿ ಸಾರಗಾನವ ಮಾಡುತ ।
ನಾರದರೇ ಈ ರೂಪದಿಂದಲಿ ತೋರದರ್ಶನ ತೋರಿದ ॥ ೨ ॥

ಪುರಂದರಾಲಯ ಘಟ್ಟದೊಳು ನೀ ನಿರುತ ಧನವಗಳಿಸಲು ।
ಪರಮ ಪುರುಷನು ವಿಪ್ರನಂದದಿ ಕರವ ನೀಡಿ ಯಾಚಿಸೆ ॥ ೩ ॥

ಪರಮ ನಿರ್ಘೃಣ ಮನವನರಿತು ಸರುವಸೂರೆಯಗೊಳಿಸಿದ ।
ಅರಿತು ಮನದಲಿ ಜರಿದುಭವಗಳ ತರುಣಿಸಹ ಹೊರಗ್ಹೊರಟನು ॥ ೪।

ಅಜಭವಾದಿಗಳರಸನಾದ **ವಿಜಯ ವಿಠಲನ** ಧ್ಯಾನಿಪ ।
ನಿಜಸುಜ್ಞಾನವ ಕೊಡಿಸಬೇಕೆಂದು ಭಜಿಪೆನೋ ಕೇಳ್ ಗುರುವರಾ ॥ ೫।

ದಯ ತೋರೋ ದೇವಾ ಗುರು ರಾಜನೇ

ದಯ ತೋರೋ ದೇವಾ ಗುರು ರಾಜನೇ
ಭಯವಾಹುದೆನಗೆ ಭವಸಾಗರದಿ

ಮೊಹಜಾಲದಲ್ಲಿ ಮಂದಬುದ್ಧನಾಗಿ
ದೇಹ ಕೊರಗಿತಯ್ಯ ರಾಘವೇಂದ್ರ ರಾಯ

ಅನ್ನ ವಸ್ತ್ರಕಾಗಿ ಅನ್ಯ ದಾಸನಾಗಿ
ಬನ್ನಪಟ್ಟೆನಯ್ಯ ಘನ ವ್ಯಸರಾಯ

ಹಟವೇಕೇ ಜೀಯ ದಿಟ್ಟ ಯೋಗಿ ಕಾಯ
ವಿಠಲೇಶ ಪ್ರಿಯ ಪ್ರಹ್ಲಾದ ರಾಯ

ಏಕೆ ಬೃಂದಾವನದಿ ನೆಲೆಸಿರುವೆ ಗುರುವೇ

ಏಕೆ ಬೃಂದಾವನದಿ ನೆಲೆಸಿರುವೆ ಗುರುವೇ
ನಾಕವಿಲಸಿತಗೀತೆ ಲಾವಣ್ಯಮೂರ್ತೆ |
ಶ್ರೀಕಾಂತನೊಲಿಸಿದುದು ಸಾಕಾಗಲಿಲ್ಲೆಂದು
ಏಕಾಂತ ಬಯಸಿದೆಯಾ ಶ್ರೀ ರಾಘವೇಂದ್ರಾ ||

ಹಿಂದೆ ನಿನಗಾಗಿ ನರಹರಿಯು ಕಂಬದಿ ಬಂದ
ಮುಂದೆ ನಂದನ ಕಂದ ನಿನ್ನೆದುರು ಕುಣಿದ
ಒಂದು ಕ್ಷಣ ಬಿಟ್ಟಿರದೆ ಹರಿಯು ನಲಿಯುತಿರೆ
ಇನ್ಯಾರ ಒಲಿಸಲೆಂದು ತಪಗೈಯುತಿರುವೆ ||೧||

ಇಷ್ಟವಿಲ್ಲದ ರಾಜ್ಯವಾಳಿ ಬಹು ವರ್ಷಗಳು
ಶ್ರೇಷ್ಠ ನೀ ಬಹು ಬಳಲಿ ಆಯಾಸಗೊಂಡೆಯಾ
ದುಷ್ಟವಾದಿಗಳ ವಾಗ್ಯುದ್ಧದಲಿ ಜಯಿಸುತಲಿ
ಶ್ರೇಷ್ಠ ಗ್ರಂಥವ ಬರೆದು ಬರೆದು ಸಾಕಾಯ್ತೆ ||೨||

ಪರಿ ಪರಿ ಅಭಿಷ್ಟಗಳ ನೀಡೆಂದು ಜನ ಕಾಡೆ
ವರವಿತ್ತು ಸಾಕಾಯ್ತೆ ಕಮಲೇಶ ದಾಸ
ಧರೆಗೆ ಮರೆಯಾಗಿ ಬೃಂದಾವನ ಸೇರಿದೊಡೆ
ಚರಣ ದಾಸರು ನಿನ್ನ ಬಿಡುವರೇನಯ್ಯಾ ||೩||

ರಥವ ನೇರಿದ ಚಂದ್ರ ರಾಘವೇಂದ್ರ

ರಥವ ನೇರಿದ ಚಂದ್ರ ರಾಘವೇಂದ್ರ |
ನೋಡಿ ಪಾಡಿ ಕುಣಿದಾಡಿ ಭಜನೆಯಮಾಡಿ ಬೇಡಿದ ವರ ಕೊಡುವ | ಅ.ಪ.|

ಕಂಬದಿ ನರಹರಿಯ ಒಲಿಸಿದ ಕಂದ |
ಕುಂಬಿಣಿಪತಿ ಕುಹಯೋಗವ ಕಳೆದ |
ನಂಬಿದವರ ಪೊರೆವ | ನಂಬಿದವರ ಪೊರೆವ | ೧ |

ಆದ್ಯ ಸತ್ಯಗ್ರಹಿ ಭಕ್ತ ಶಿರೋಮಣಿ |
ಉದ್ ಗ್ರಂಥಗಳನು ರಚಿಸಿದ ದಿನಮಣಿ |
ಮಧ್ವಮತೋದ್ಧರ | ಮಧ್ವಮತೋದ್ಧರ | ೨ |

ಭುಪತಿ ವಿಠಲನ ಪ್ರೀತಿ ವಿಖ್ಯಾತ |
ಅಪದ್ಭಾಂಧವ ಅನಥ ನಾಥ |
ರಥೋತ್ಸವದಿ ಮೆರೆವ | ರಥೋತ್ಸವದಿ ಮೆರೆವ | ೩ |

ತುಂಗಾ ತೀರದಿ ನಿಂತ ಸುಯತಿವರನ್ಯಾರೆ ಪೇಳಮ್ಮಯ್ಯ

ತುಂಗಾ ತೀರದಿ ನಿಂತ ಸುಯತಿವರನ್ಯಾರೆ ಪೇಳಮ್ಮಯ್ಯ
ಸಂಗೀತಪ್ರಿಯ ಮಂಗಲಸುಗುಣತರಂಗ ಮುನಿಕುಲೋತ್ತುಂಗ ಕಾಣಮ್ಮ ||

ಚೆಲುವ ಸುಮುಖ ಫಣೆಯಲ್ಲಿ ತಿಲಕ ನಾಮಗಳು ನೋಡಮ್ಮಯ್ಯ
ಜಲಮಣಿಯ ಕೊರಳಲ್ಲಿ ತುಲಸಿಮಾಲೆಗಳು ಪೇಳಮ್ಮಯ್ಯ
ಸುಲಲಿತ ಕಮಂಡಲು ದಂಡವನೆ ಧರಿಸಿಹನೆ ನೋಡಮ್ಮಯ್ಯ
ಕ್ಷುಲ್ಲ ಹಿರಣ್ಯಕನಲ್ಲಿ ಜನಿಸಿದ ಪ್ರಹ್ಲಾದನು ತಾನಿಲ್ಲಿಹನಮ್ಮ ||೧||

ಸುಂದರ ಚರಣಾರವಿಂದಕೆ ಭಕುತಿಯಲಿಂದ ನೋಡಮ್ಮಯ್ಯ
ವಂದಿಸಿ ಸ್ತುತಿಸುವ ಭೂಸುರರ ಬಲು ವೃಂದ ನೋಡಮ್ಮಯ್ಯ
ಚಂದದಲಂಕೃತಿಯಿಂದ ಶೋಭಿಸುವಾನಂದ ನೋಡಮ್ಮಯ್ಯ
ಹಿಂದೆ ವ್ಯಾಸಮುನಿಯೆಂದೆನಿಸಿದ ಕರ್ಮಂದಿಗಳರಸ ಅಘದಿಂದ ರಹಿತನೆ ||೨||

ಅಭಿನವ ಜನಾರ್ಧನ ವಿಠಲನ ಧ್ಯಾನಿಸುವ ನೋಡಮ್ಮಯ್ಯ
ಅಭಿವಂದಿಪರಿಗೆ ಅಖಿಳಾರ್ಥವ ಸಲ್ಲಿಸುವ ನೋಡಮ್ಮಯ್ಯ
ನಭಮಣಿಯಂದದಿ ಭುಮಿಯಲ್ಲಿ ಶೋಭಿಸುವ ನೋಡಮ್ಮಯ್ಯ
ಶುಭಗುಣನಿಧಿ ಶ್ರೀರಾಘವೇಂದ್ರ ಯತಿ ಅಬುಜಭವಾಂಡದಿ ಪ್ರಬಲ ಕಾಣಮ್ಮ ||೩||

ಪಾಲಿಸಮ್ಮ ಮುದ್ದು ಶಾರದೆ |

ಪಾಲಿಸಮ್ಮ ಮುದ್ದು ಶಾರದೆ |
ಎನ್ನ ನಾಲಿಗೆಯಲಿ ನಿಲ್ಲ ಬಾರದೆ ||
ಲೋಲಲೋಚನೆ ತಾಯಿ ನಿರುತ ನಂಬಿದೆ ನಿನ್ನ ||ಅಪ||

ಅಕ್ಷರಕ್ಷರ ವಿವೇಕವ | ನಿನ್ನ| ಕುಕ್ಷಿಯೊಳೀರೇಳು ಲೋಕವ ||
ಸಾಕ್ಷತ್ ರೂಪದಿಂದ ಒಲಿದು ರಕ್ಷಿಸು ತಾಯೇ ||೧||

ಶೃಂಗಾರಪುರ ನೆಲೆವಾಸಿನೀ ದೇವೀ | ಸಂಗೀತ ಗಾನ ವಿಲಾಸಿನಿ ||
ಮಂಗಳ ಗಾತ್ರಳೆ ಭಳಿರೆ ಬ್ರಹ್ಮನ ರಾಣಿ ||೨||

ಸರ್ವಾಲಂಕಾರ ದಯಾಮೂರುತಿ ನಿನ್ನ ಚರಣವ ಸ್ತುತಿಸುವೆ ಕೀರುತಿ |
ಗುರುಮೂರ್ತಿ ಪುರಂದರವಿಠಲನ್ನ ಸ್ತುತಿಸುವೆ ||೩||

ಬಂದನೋ ಗೋವಿಂದ ಚಂದದಿ ಆನಂದ

ಬಂದನೋ ಗೋವಿಂದ ಚಂದದಿ ಆನಂದ
ಸುಂದರಿಯ ಮಂದಿರಕ್ಕೆ ನಂದನಕಂದ ನಂದನಕಂದ

ಸುಂದರಕರ ನಂದ ಕಂದ ಗಂಭೀರ
ಇಂದು ವದನೆಯರ ಮುಕಗಳಿಂದ ನೊಡಿದ
ತಂದ ಕುಸುಮ ಕರದಿಂದ ಮುಡಿಸಿದ
ಬಂದನೊ ಗೋವಿಂದನೊ ಅರವಿಂದ ನಯನ |೧|

ಕಾನನದಲ್ಲಿ ಬಲುದೀನನಾಗಲಿ
ವೇಣುನದವು ತಾಕೂಡಿ ಮೊದಲು
ಜಾಣನಿವನು ಸುಮ ಬಾಣ ಪಿತನು
ಮಾನಿನಿ ಮನಗಳೊಲಿಯುವ ಗಾನ ಮಡುತ್ತಾ |೨|

ಓಡಿ ಬಂದರೊ ಬಲು ಬೇಡಿಕೊಂಡರೊ
ಗರುಡಿಕಾರನು ಅವರ ನೋಡಿ ಮೆರೆದರೊ
ಮಾಡಿದ ಜಾಲ ವಾಸುದೇವ ವಿಠಲ
ಮಾಡಿದ ಮನ ಮಾಡಿದ ತಾ ಕೂಡಿದನಾಗ |೩|

ಬಿಡೆನೋ ನಿನ್ನಂಘ್ರಿ ಶ್ರೀನಿವಾಸ

ಬಿಡೆನೋ ನಿನ್ನಂಘ್ರಿ ಶ್ರೀನಿವಾಸ
ಎನ್ನ ಡುಡಿಸಿಕೊಳ್ಳೆಲೋ ಶ್ರೀನಿವಾಸ
ನಿನ್ನ ನುಡಿಯೆ ಜಿತಲ್ಲೋ ಶ್ರೀನಿವಾಸ
ನನ್ನ ನಡೆ ತಪ್ಪು ಕಾಯೋ ಶ್ರೀನಿವಾಸ|

ಬಡಿಯೋ ಬೆನ್ನಲಿ ಶ್ರೀನಿವಾಸ
ಎನ್ನ ಒಡಲ ಹೊಯ್ಯದಿರೊ ಶ್ರೀನಿವಾಸ
ನಾ ಬಡವ ಕಾಣೆಲೋ ಶ್ರೀನಿವಾಸ
ನಿನ ಒಡಲ ಹೊಕ್ಕೆನೊ ಶ್ರೀನಿವಾಸ ||

ಪಂಜು ಹಿಡಿವೆನೊ ಶ್ರೀನಿವಾಸ
ನಿನ ಎಂಜಲ ಬಳಿದುಂಬೆ ಶ್ರೀನಿವಾಸ
ನಾ ಸಂಜೆ ಉದಯಕೆ ಶ್ರೀನಿವಾಸ
ಕಾಳಂಜಿಯ ಪಿಡಿವೆ ಶ್ರೀನಿವಾಸ||

ನಿನ್ನವ ನಿನ್ನವ ಶ್ರೀನಿವಾಸ
ನಾನನ್ಯ ಅರಿಯೆನೊ ಶ್ರೀನಿವಾಸ
ಅಯ್ಯ ಮನ್ನಿಸೊ ತಾಯಿತಂದೆ ಶ್ರೀನಿವಾಸ
ಪ್ರಸನ್ನ ವೆಂಕಟಾದ್ರಿ ಶ್ರೀನಿವಾಸ ||

ನಿನ್ನ ಒಲುಮೆಯಿಂದ

ನಿನ್ನ ಒಲುಮೆಯಿಂದ ನಿಖಿಳ ಜನರು ಬಂದು ಮನ್ನಿಸುವರೋ ಮಹರಾಯ ।
ಎನ್ನ ಪುಣ್ಯಗಳಿಂದ ಈ ಪರಿ ಉಂಟೆನೋ ನಿನ್ನದೆ ಸಕಲ ಸಂಪತ್ತು ।

ಜೀರ್ಣಮಲಿನ ವಸ್ತ್ರ ಕಾಣದ ಮನುಜಗೆ ಊರ್ಣವಿಚಿತ್ರ ವಸನಾ ।
ವರ್ಣವರ್ಣದಿಂದ ಬಾಹೋದೇನೊ ಸಂಪೂರ್ಣಗುಣಾರ್ಣವ ದೇವಾ ।

ಸಂಜೆತನಕ ಇದ್ದು ಸಣ್ಣ ಸೌಟಿನ ತುಂಬಾ ಗಂಜೀ ಕಾಣದೆ ಬಳಲಿದೆನೊ ಹಿಂದೆ ।
ವ್ಯಂಜನ ನಾನಾ ಸುಭಕ್ಷ್ಯಭೋಜ್ಯಂಗಳ ಭುಂಜಿಸುವುದು ಮತ್ತೇನೋ ಹರಿಯೇ।

ಇಬ್ಬ ಹೆಂಡತಿಗೆ ನಾ ಅನ್ನ ಹಾಕುವುದಕ್ಕೆ ತಬ್ಬಿಬ್ಬುಗೊಂಡೆನೊ ಹಿಂದೆ ।
ನಿಬ್ಬರದಿಂದಲಿ ಸರ್ವರ ಕೂಡಿನ್ನು ಹಬ್ಬವನುಂಡೆನೊ ಹರಿಯೇ ।

ಮನೆಮನೆ ತಿರುಗಿದೆ ಕಾಸುಪುಟ್ಟದೆ ಸುಮ್ಮನೆ ಚಾಲವರಿದು ಬಾಹೆನೊ ।
ಹಣಹೊನ್ನು ದ್ರವ್ಯ ಇಮ್ಮಿಂದೊಮ್ಮೆ ಈಗ ಎನಗೆ ಪ್ರಾಪುತಿ ನೋಡೊ ಜೀಯಾ ।

ನೀಚೋಚ್ಚ ತಿಳಿಯದೆ ಸರ್ವರ ಚರಣಕ್ಕೆ ಚಾಚಿದೆ ನೊಸಲ ಹಸ್ತಗಳ ।
ಯೋಚಿಸಿ ನೋಡಲು ಸೋಜಿಗವಾಗಿದೆ ವಾಚಕೆ ನಿಲುಕದೊ ಹರಿಯೇ ।

ವೈದಿಕ ಪದವಿಯ ಕೊಡುವಗೆ ಲೌಕಿಕ ನೈದಿಸುವದು ಬಲುಖ್ಯಾತೆ ।
ಮೈದುನಗೊಲಿದ ಶ್ರೀ **ವಿಜಯ ವಿಠಲ** ನಿನ್ನ ಪಾದ ಸಾಕ್ಷಿಯ ಅನುಭವವೋ ।